Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग—IX    अनुभाग 1
PART IX    SECTION 1
ಭಾಗ IX    ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1<br>No. 1<br>ಸಂಖ್ಯೆ ೧ | नई दिल्ली सोमवार, जून 17, 1985<br>New Delhi Monday, June 17, 1985<br>ನವದೆಹಲಿ ಸೋಮವಾರ, ಜೂನ್ ೧೭, ೧೯೮೫ | जेष्ट—27 1907 (शक)<br>Jaistha 27, 1907 (Saka)<br>ಜ್ಯೇಷ್ಠ ೨೭, ೧೯೦೭ (ಶಕ) | खन्ड—2<br>Vol. 2<br>ಸಂಪುಟ ೨ |


## MINISTRY OF LAW. AND JUSTICE

(Legislative Department)

New Delhi, February 27, 1985/Falguna 1906 (Sakha)

The translations in Kannada of the following namely—(1) The Two Members constituencies (Abolition) Act. 1961. (2) The Apprntices Act. 1961 (3) The Haj Committee Act, 1959 (4) The Working Journalists (Fixation of Rates of Wages) Act, 1958 (5) The Indian Trust Act, 1882. are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act. 1973 (50 of 1973).

ಕೆಳಕಂಡ ಅಧಿನಿಯಮಗಳ ಎಂದರೆ, (೧) ದ್ವಿಸದಸ್ಯ ಚುನಾವಣಾ ಕ್ಷೇತ್ರಗಳ (ರದ್ದಿಯಾತಿ) ಅಧಿನಿಯಮ, ೧೯೬೧ ; (೨) ಉಮೇದವಾರರ ಅಧಿನಿಯಮ, ೧೯೬೧ ; (೩) ಹಜ್ ಸಮಿತಿ ಅಧಿನಿಯಮ, ೧೯೫೯ ; (೪) ಕಾರ್ಯನಿರತ ಪತ್ರಿಕೋದ್ಯಮಿ (ಮಜೂರಿ ದರ ನಿಗದಿ) ಅಧಿನಿಯಮ, ೧೯೫೮ ; (೫) ಭಾರತ ನ್ಯಾಸ ಅಧಿನಿಯಮ, ೧೮೮೨—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಉಮೇದುವಾರರ ಅಧಿನಿಯಮ 1961.

## ( 1961ರ 52 )

[ಜನವರಿ 1, 1985ರಂದು ಜಾರಿಯಲ್ಲಿದ್ದಂತೆ.] [12ನೇ ಡಿಸೆಂಬರ್ 1961]

ಉಮೇದುವಾರರ ತರಬೇತಿಯನ್ನು ವಿನಿಯಮಗೊಳಿಸುವ ಹಾಗೂ ನಿಯಂತ್ರಿಸುವ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮವಿಂತವಾಗತಕ್ಕದ್ದು :—

## ಅಧ್ಯಾಯ—I

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.—(1) ಈ ಅಧಿನಿಯಮವನ್ನು ಉಮೇದುವಾರರ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(4) ಈ ಅಧಿನಿಯಮದ ಉಪಬಂಧಗಳು—

(ಕ) ಯಾವ ಪ್ರದೇಶಕ್ಕೆ ಅಥವಾ ಕೈಗಾರಿಕೆಗೆ ಸದರಿ ಉಪಬಂಧಗಳು ಅಧಿಸೂಚನೆಯಲ್ಲಿ ನಮೂದಿಸಬಹುದಾದಂಥ ದಿನಾಂಕದಿಂದ ಅನ್ವಯ ವಾಗತಕ್ಕದ್ದೆಂದು ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿರ್ದಿಷ್ಟಪಡಿಸುವುದೋ ಆ ಪ್ರದೇಶವನ್ನು ಅಥವಾ ಕೈಗಾರಿಕೆಯನ್ನು ಉಳಿದು, ಇತರ ಯಾವುದೇ ಪ್ರದೇಶಕ್ಕೆ ಅಥವಾ ಆ ಯಾವುದೇ ಪ್ರದೇಶದಲ್ಲಿರುವ ಯಾವುದೇ ಕೈಗಾರಿಕೆಗೆ:

(ಖ) * * * * * *

(ಗ) ಉಮೇದುವಾರರಿಗೆ ತರಬೇತಿ ಕೊಡುವುದಕ್ಕಾಗಿ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ಯಾವುದೇ ವಿಶೇಷ ಉಮೇದುವಾರಿಕೆಯ ಯೋಜನೆಗೆ ಅನ್ವಯಿಸತಕ್ಕದ್ದಲ್ಲ.

2. ಪರಿಭಾಷೆಗಳು :—ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ—

(ಕ) ''ಅಖಿಲ ಭಾರತ ಪರಿಷತ್ತು'', ಎಂದರೆ, ಭಾರತ ಸರ್ಕಾರವು ಹಿಂದಿನ ಶಿಕ್ಷಣ ಮಂತ್ರಾಲಯದಲ್ಲಿ 1945ರ ನವೆಂಬರ್ 30ನೇ ದಿನಾಂಕದ ಎಫ್–16–10–44–ಇ IIIನೇ ನಂಬರಿನ ನಿರ್ಣಯದ ಮೂಲಕ ಸ್ಥಾಪಿಸಿದ ಅಖಿಲ ಭಾರತ ತಾಂತ್ರಿಕ ಶಿಕ್ಷಣದ ಪರಿಷತ್ತು.

(ಕಕ) "ಉಮೇದುವಾರ" ಎಂದರೆ ಉಮೇದುವಾರಿಕೆಯ ಕರಾರಿಗನುಗುಣವಾಗಿ ಉಮೇದುವಾರಿಕೆಯ ತರಬೇತಿಯನ್ನು ಪಡೆಯುತ್ತಿರುವ ವ್ಯಕ್ತಿ.

(ಕಕಕ) "ಉಮೇದುವಾರಿಕೆ ತರಬೇತಿ" ಎಂದರೆ, ಉಮೇದುವಾರಿಕೆಯ ಕರಾರಿಗನುಗುಣವಾಗಿ ಮತ್ತು ಬೇರೆ ಬೇರೆ ಉಮೇದುವಾರಿಕೆ ವರ್ಗ ಗಳಿಗೆ ಬೇರೆ ಬೇರೆಯಾಗಿರಬಹುದಾದ ನಿಯಮಿಸಲಾದ ಷರತ್ತುಗಳ ಮತ್ತು ನಿಬಂಧನೆಗಳ ಮೇರೆಗೆ ಯಾವುದೇ ಕೈಗಾರಿಕೆಯಲ್ಲಿ ಅಥವಾ ಕಾರ್ಯಸಂಸ್ಥೆ ಯಲ್ಲಿನ ತರಬೇತಿ ವ್ಯಾಸಂಗ ಕ್ರಮ;

(ಖ) ''ಉಮೇದುವಾರಿಕೆಯ ಸಲಹೆಗಾರ'' ಎಂದರೆ, 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಿಂತನಾದ ಕೇಂದ್ರ ಉಮೇದುವಾರಿಕೆಯ ಸಲಹೆಗಾರ ಅಥವಾ ಆ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನೇಮಿಂತನಾದ ರಾಜ್ಯ ಉಮೇದುವಾರಿಕೆಯ ಸಲಹೆಗಾರ;

(ಗ) ''ಉಮೇದುವಾರಿಕೆಯ ಪರಿಷತ್ತು'' ಎಂದರೆ, 24ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿತವಾದ ಕೇಂದ್ರ ಉಮೇದು ವಾರಿಕೆಯ ಪರಿಷತ್ತು ಅಥವಾ ರಾಜ್ಯ ಉಮೇದುವಾರಿಕೆಯ ಪರಿಷತ್ತು ;

(ಘ) ''ಸಮುಚಿತ ಸರ್ಕಾರ'' ಎಂದರೆ :—

(1) (ಕ) ಕೇಂದ್ರ ಉಮೇದುವಾರಿಕೆ ಪರಿಷತ್ತಿಗೆ; ಅಥವಾ

(ಕ ಕ) ಪದವೀಧರ ಅಥವಾ ತಾಂತ್ರಿಕ ಉಮೇದುವಾರರ ಪ್ರಾಯೋಗಿಕ ತರಬೇತಿಗೆ; ಅಥವಾ

(ಖ) ಯಾವುದೇ ರೈಲ್ವೆಯ, ಪ್ರಮುಖ ಬಂದರಿನ, ಗಣಿಯ ಅಥವಾ ತೈಲ ಕ್ಷೇತ್ರದ ಯಾವುದೇ ಕಾರ್ಯಸಂಸ್ಥೆಗೆ, ಅಥವಾ

(ಗ) (i) ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಇಲಾಖೆಯ ;

(ii) ಕೇಂದ್ರ ಸರ್ಕಾರವು ಅಥವಾ ಭಾಗಶಃ ಆ ಸರ್ಕಾರವು ಮತ್ತು ಭಾಗಶಃ ಒಂದು ಅಥವಾ ಹೆಚ್ಚು ರಾಜ್ಯಸರ್ಕಾರಗಳು ಶೇಕಡ 51ಕ್ಕಿಂತ ಕಡಿಮೆಯಿಲ್ಲದ ಷೇರು ಬಂಡವಾಳವನ್ನು ಹೊಂದಿರುವ ಯಾವುದೇ ಕಂಪನಿಯ;

(iii) ಕೇಂದ್ರ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿತವಾಗಿ ಕೇಂದ್ರ ಸರ್ಕಾರದ ಒಡೆತನಕ್ಕೆ, ನಿಯಂತ್ರಣಕ್ಕೆ ಅಥವಾ ವ್ಯವಸ್ಥಾಪನೆಗೆ ಒಳಪಟ್ಟಿರುವ (ಸಹಕಾರಿ ಸಂಘವನ್ನೊಳಗೊಂಡ) ನಿಗಮದ ಒಡೆತನಕ್ಕೆ, ನಿಯಂತ್ರಣಕ್ಕೆ ಅಥವಾ ವ್ಯವಸ್ಥಾಪನೆಗೆ ಒಳಪಟ್ಟ ಯಾವುದೇ ಕಾರ್ಯ ಸಂಸ್ಥೆಗೆ,

—ಸಂಬಂಧಿಸಿ ಕೇಂದ್ರ ಸರ್ಕಾರ ;

(2) (ಕ) ರಾಜ್ಯ ಉಮೇದುವಾರಿಕೆ ಪರಿಷತ್ತಿಗೆ, ಅಥವಾ

(ಖ) ಈ ಖಂಡದ (1)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಕಾರ್ಯಸಂಸ್ಥೆಯಲ್ಲದ ಇತರ ಯಾವುದೇ ಕಾರ್ಯಸಂಸ್ಥೆಗೆ,

—ಸಂಬಂಧಿಸಿ ರಾಜ್ಯ ಸರ್ಕಾರ;

(ಘಘ) "ತಾಂತ್ರಿಕ ಶಿಕ್ಷಣ ಮಂಡಲಿ ಅಥವಾ ರಾಜ್ಯ ಪರಿಷತ್ತು" ಎಂದರೆ, ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ತಾಂತ್ರಿಕ ಶಿಕ್ಷಣ ಮಂಡಲಿ ಅಥವಾ ರಾಜ್ಯ ಪರಿಷತ್ತು;

(ಙ) "ಹೆಸರಿಸಲಾದ ವ್ಯಾಪಾರ" ಎಂದರೆ, ಕೇಂದ್ರ ಸರ್ಕಾರವು ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಂದಿಗೆ ಸಮಾಲೋಚಿಸಿದ ಅನಂತರ ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಹೆಸರಿಸಲಾದ ವ್ಯಾಪಾರ ಎಂದು ನಿರ್ದಿಷ್ಟಪಡಿಸುವ ಯಾವುದೇ ವ್ಯಾಪಾರ ಅಥವಾ ಉದ್ಯೋಗ ಅಥವಾ ಇಂಜಿನಿಯರಿಂಗ್ ಅಥವಾ ತಂತ್ರ ವಿಜ್ಞಾನದ ವಿಷಯ ಕ್ಷೇತ್ರ ;

(ಚ) "ನಿಯೋಜಕ" ಎಂದರೆ, ಒಬ್ಬರನ್ನು ಅಥವಾ ಒಬ್ಬರಿಗಿಂತ ಹೆಚ್ಚು ಇತರ ವ್ಯಕ್ತಿಗಳನ್ನು ಕಾರ್ಯ ಸಂಸ್ಥೆಯಲ್ಲಿ ಪರಿಶ್ರಮಧನಕ್ಕಾಗಿ ಯಾವುದೇ ಕೆಲಸವನ್ನು ಮಾಡಲು ನಿಯೋಜಿಸುವ ಯಾವನೇ ವ್ಯಕ್ತಿ ಮತ್ತು ಇದು ಅಂಥ ಕಾರ್ಯಸಂಸ್ಥೆಯಲ್ಲಿನ ನಿಯೋಜಿತರ ಮೇಲ್ವಿಚಾರಣೆಯನ್ನು ಮತ್ತು ನಿಯಂತ್ರಣವನ್ನು ವಹಿಸಿಕೊಡಲಾಗಿರುವ ಯಾವನೇ ವ್ಯಕ್ತಿಯನ್ನೂ ಒಳಗೊಳ್ಳುತ್ತದೆ.

(ಛ) "ಕಾರ್ಯಸಂಸ್ಥೆ" ಎಂಬುದು ಯಾವುದೇ ಕೈಗಾರಿಕೆಯನ್ನು ನಡೆಸಲಾಗುತ್ತಿರುವ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ;

(ಜ) "ಖಾಸಗೀ ವಲಯದ ಕಾರ್ಯ ಸಂಸ್ಥೆ" ಎಂದರೆ, ಸರ್ಕಾರಿ ವಲಯದ ಕಾರ್ಯ ಸಂಸ್ಥೆಯಲ್ಲದ ಕಾರ್ಯಸಂಸ್ಥೆ;

(ಝ) "ಸರ್ಕಾರಿ ವಲಯದ ಕಾರ್ಯಸಂಸ್ಥೆ" ಎಂದರೆ.—

(1) ಸರ್ಕಾರದ ಅಥವಾ ಸರ್ಕಾರದ ಒಂದು ಇಲಾಖೆಯ;

(2) ಕಂಪನಿಗಳ ಅಧಿನಿಯಮ 1956ರ 617ನೇ ಪ್ರಕರಣದಲ್ಲಿ ಪರಿಭಾಷಿತವಾದ ಸರ್ಕಾರಿ ಕಂಪನಿಯ;

(3) ಕೇಂದ್ರದ, ಪ್ರಾಂತ್ಯದ ಅಥವಾ ರಾಜ್ಯದ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿತವಾಗಿದ್ದು ಸರ್ಕಾರದ ಒಡೆತನಕ್ಕೆ; ಯಂತ್ರಣಕ್ಕೆ ಅಥವಾ ವ್ಯವಸ್ಥಾಪನೆಗೆ ಸೇರಿರುವ (ಸಹಕಾರ ಸಂಘವನ್ನೊಳಗೊಂಡ) ನಿಗಮದ;

(4) ಸ್ಥಳೀಯ ಪ್ರಾಧಿಕಾರದ;

—ಒಡೆತನಕ್ಕೆ, ನಿಯಂತ್ರಣಕ್ಕೆ ಅಥವಾ ವ್ಯವಸ್ಥಾಪನೆಗೆ ಸೇರಿರುವ ಕಾರ್ಯಸಂಸ್ಥೆ;

(ಞ) "ಪದವೀಧರ ಅಥವಾ ತಾಂತ್ರಿಕ ಉಮೇದುವಾರ" ಎಂದರೆ, ಸರ್ಕಾರದ ಮನ್ನಣೆಯನ್ನು ಪಡೆದ ಯಾವುದೇ ಸಂಸ್ಥೆಯು ಕೊಟ್ಟ, ಇಂಜಿನಿಯರಿಂಗ್‌ನಲ್ಲಿನ ಅಥವಾ ತಾಂತ್ರಿಕ ವಿಜ್ಞಾನದಲ್ಲಿನ ಪದವಿಯನ್ನು ಅಥವಾ ಡಿಪ್ಲೋಮಾವನ್ನು ಅಥವಾ ತತ್ಸಮಾನವಾದ ಅರ್ಹತೆಯನ್ನು ಪಡೆದಿರುವ, ಅಥವಾ ಅವುಗಳನ್ನು ಪಡೆಯುವುದಕ್ಕಾಗಿ ತರಬೇತಿಯನ್ನು ಹೊಂದುತ್ತಿರುವ ಮತ್ತು ಇಂಜನಿಯರಿಂಗ್‌ನಲ್ಲಿನ ಅಥವಾ ತಂತ್ರ ವಿಜ್ಞಾನದಲ್ಲಿನ ನಿಯಮಿಸಬಹುದಾದಂಥ ವಿಷಯ ಕ್ಷೇತ್ರದಲ್ಲಿ ಉಮೇದುವಾರಿಕೆಯ ತರಬೇತಿಯನ್ನು ಪಡೆಯುತ್ತಿರುವ ಯಾವನೇ ಉಮೇದುವಾರ;

(ಟ) "ಕೈಗಾರಿಕೆ" ಎಂದರೆ, ಯಾವುದೇ ವ್ಯಾಪಾರವನ್ನು, ಉದ್ಯೋಗವನ್ನು ಅಥವಾ ಇಂಜಿನಿಯರಿಂಗ್‌ನಲ್ಲಿನ ಅಥವಾ ತಾಂತ್ರಿಕ ವಿಜ್ಞಾನದಲ್ಲಿನ ವಿಷಯ ಕ್ಷೇತ್ರವನ್ನು ಹೆಸರಿಸಲಾದ ವ್ಯಾಪಾರವೆಂದು ಯಾವ ಕೈಗಾರಿಕೆಯಲ್ಲಿ ಅಥವಾ ವ್ಯವಹಾರದಲ್ಲಿ ನಿರ್ದಿಷ್ಟಪಡಿಸಬಹುದೋ ಆ ಯಾವುದೇ ಕೈಗಾರಿಕೆ ಅಥವಾ ವ್ಯವಹಾರ;

(ಠ) "ರಾಷ್ಟ್ರೀಯ ಪರಿಷತ್ತು" ಎಂದರೇ ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ (ಪುನರ್ ವ್ಯವಸ್ಥೆ ಮತ್ತು ನಿಯೋಜನ ಮಹಾ.—ನಿರ್ದೇಶನಾಲಯ) 1956ರ ಆಗಸ್ಟ್ 21ನೇ ದಿನಾಂಕದ ಟಿಆರ್‌ಇ.ಪಿ.-24-56ನೇ ನಂಬರಿನ ನಿರ್ಣಯದ ಮೂಲಕ ವೃತ್ತಿ ವ್ಯಾಪಾರಗಳಲ್ಲಿ ತರಬೇತಿ ಕೊಡಲು ಸ್ಥಾಪಿತವಾದ ರಾಷ್ಟ್ರೀಯ ಪರಿಷತ್ತು;

(ಡ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಡಡ) "ಪ್ರಾದೇಶಿಕ ಮಂಡಲಿ" ಎಂದರೆ, ಬೊಂಬಾಯಿ, ಕಲ್ಕತ್ತ, ಮದರಾಸು ಅಥವಾ ಕಾನ್‌ಪುರದಲ್ಲಿ ಸಂಘಗಳ ನೋಂದಣಿ ಅಧಿನಿಯಮ, 1860ರ ಮೇರೆಗೆ ನೋಂದಾಯಿತವಾದ ಯಾವುದೇ ಉಮೇದುವಾರಿ ತರಬೇತಿ ಮಂಡಲಿ;

(ಢ) "ರಾಜ್ಯ" ಎಂಬುದು ಸಂಘ ರಾಜ್ಯ ಕ್ಷೇತ್ರವನ್ನು ಒಳಗೊಳ್ಳುತ್ತದೆ;

(ಣ) "ರಾಜ್ಯ ಪರಿಷತ್ತು" ಎಂದರೆ, ವೃತ್ತಿ ವ್ಯಾಪಾರಗಳಲ್ಲಿನ ತರಬೇತಿಗಾಗಿ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ಪರಿಷತ್ತು;

(ತ) ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿ, "ರಾಜ್ಯ ಸರ್ಕಾರ" ಎಂದರೆ ಅದರ ಆಡಳಿತಗಾರ;

(ಥ) "ವ್ಯಾಪಾರದ ಉಮೇದುವಾರ" ಎಂದರೆ, ನಿಯಮಿಸಬಹುದಾದಂಥ ಯಾವುದೇ ವ್ಯಾಪಾರದಲ್ಲಿ ಅಥವಾ ಉದ್ಯೋಗದಲ್ಲಿ ಉಮೇದುವಾರಿಕೆಯ ತರಬೇತಿಯನ್ನು ಪಡೆಯುತ್ತಿರುವ ಉಮೇದುವಾರ;

## ಅಧ್ಯಾಯ II

## ಉಮೇದುವಾರರು ಮತ್ತು ಅವರ ತರಬೇತಿ

3. ಉಮೇದುವಾರನಾಗಿ ನೇಮಿತನಾಗಲು ಅರ್ಹತೆಗಳು :— ಯಾವನೇ ವ್ಯಕ್ತಿಯು—

(ಕ) ಹದಿನಾಲ್ಕು ವರ್ಷ ವಯಸ್ಸಿಗೆ ಕಡಿಮೆಯಾಗಿಲ್ಲದ, ಮತ್ತು

(ಖ) ನಿಯಮಿಸಬಹುದಾದಂಥ ಶಿಕ್ಷಣ ಮಟ್ಟವನ್ನು ಮತ್ತು ದೇಹದಾರ್ಢ್ಯವನ್ನು ಹೊಂದಿದ್ದ,

—ಹೊರತು, ಯಾವುದೇ ಹೆಸರಿಸಲಾದ ವ್ಯಾಪಾರದಲ್ಲಿ ಉಮೇದುವಾರಿಕೆ ತರಬೇತಿಯನ್ನು ಹೊಂದಲು ನೇಮಿತನಾಗುವುದಕ್ಕೆ ಅರ್ಹನಾಗಿರ ತಕ್ಕುದಲ್ಲ:

ಪರಂತು, ಹೆಸರಿಸಲಾದ ಬೇರೆ ಬೇರೆ ವ್ಯಾಪಾರಗಳಲ್ಲಿನ ಉಮೇದುವಾರಿಕೆ ತರಬೇತಿಗೆ ಸಂಬಂಧಿಸಿ ಮತ್ತು ಉಮೇದುವಾರರ ಬೇರೆ ಬೇರೆ ಪ್ರವರ್ಗಗಳಿಗೆ ಸಂಬಂಧಿಸಿ, ಬೇರೆ ಬೇರೆ ಮಟ್ಟಗಳನ್ನು ನಿಯಮಿಸಬಹುದು.

3ಕ. ಅನುಸೂಚಿತ ಜಾತಿಗಳಿಗಾಗಿ ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ಹೆಸರಿಸಲಾದ ವ್ಯಾಪಾರಗಳಲ್ಲಿ ತರಬೇತಿ ಸ್ಥಳಗಳನ್ನು ಕಾಯ್ದಿರಿಸುವುದು :—(1) ಹೆಸರಿಸಲಾದ ಪ್ರತಿಯೊಂದು ವ್ಯಾಪಾರದಲ್ಲಿ ಅನುಸೂಚಿತ ಜಾತಿಗಳಿಗಾಗಿ ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ನಿಯೋಜಕನು ತರಬೇತಿ ಸ್ಥಳಗಳನ್ನು ಕಾಯ್ದಿರಿಸತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅನುಸೂಚಿತ ಜಾತಿಗಳಿಗಾಗಿ ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ಕಾಯ್ದಿರಿಸಬೇಕಾದ ತರಬೇತಿ ಸ್ಥಳಗಳ ಸಂಖ್ಯೆಯು ಸಂಬಂಧಪಟ್ಟ ರಾಜ್ಯದಲ್ಲಿನ ಅನುಸೂಚಿ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯನ್ನು ಗಮನಿಸಿ, ನಿಯಮಿಸಬಹುದಾದಷ್ಟು ಇರತಕ್ಕದು.

ವಿವರಣೆ:—ಈ ಪ್ರಕರಣದಲ್ಲಿ "ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು" ಎಂಬ ಪದಾವಳಿಗಳಿಗೆ ಸಂವಿಧಾನದ 366ನೇ ಅನುಚ್ಛೇದದ (24)ನೇ ಮತ್ತು (25)ನೇ ಖಂಡಗಳಲ್ಲಿ ಇರುವ ಅರ್ಥವು ಇರತಕ್ಕದು.

4. ಉಮೇದುವಾರಿಕೆಯ ಕರಾರು :—(1) ಹೆಸರಿಸಲಾದ ವ್ಯಾಪಾರದಲ್ಲಿ ಉಮೇದುವಾರನಾಗಿ ಉಮೇದುವಾರಿಕೆಯ ತರಬೇತಿಯನ್ನು ಪಡೆಯಲು ಯಾವನೇ ವ್ಯಕ್ತಿಯನ್ನು, ಅವನು ಅಥವಾ ಅವನು ಅಲ್ಪ ವಯಸ್ಕನಾಗಿದ್ದರೆ, ಅವನ ಪಾಲಕನು ನಿಯೋಜಕನೊಡನೆ ಉಮೇದುವಾರಿಕೆಯ ಕರಾರನ್ನು ಮಾಡಿಕೊಂಡಿದ್ದ ಹೊರತು ನೇಮಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಉಮೇದುವಾರಿಕೆ ಕರಾರನ್ನು ಮಾಡಿಕೊಂಡ ದಿನಾಂಕದಿಂದ ಉಮೇದುವಾರಿಕೆಯ ತರಬೇತಿಯು ಪ್ರಾರಂಭವಾಗಿದೆಯೆಂದು ಭಾವಿಸತಕ್ಕದು.

(3) ಉಮೇದುವಾರಿಕೆಯ ಪ್ರತಿಯೊಂದು ಕರಾರು, ಆ ಕರಾರಿನ ಉಭಯ ಪಕ್ಷದವರು ಒಪ್ಪಿಕೊಂಡ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಒಳಗೊಳ್ಳಬಹುದು:

ಪರಂತು, ಅಂಥ ಯಾವುದೇ ನಿಬಂಧನೆಯು ಅಥವಾ ಷರತ್ತು, ಈ ಅಧಿನಿಯಮದ ಯಾವುದೇ ಉಪಬಂಧಕ್ಕೆ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಕ್ಕೆ ಅಸಂಗತವಾಗಿರತಕ್ಕುದಲ್ಲ.

(4) (1)ನೇ ಉಪ-ಪ್ರಕರಣದ ಮೇರೆಗೆ ಮಾಡಿಕೊಳ್ಳಲಾದ ಉಮೇದುವಾರಿಕೆಯ ಪ್ರತಿಯೊಂದು ಕರಾರನ್ನು, ನಿಯಮಿಸಬಹುದಾದ ಅವಧಿಯೊಳಗೆ, ನಿಯೋಜಕನು ಉಮೇದುವಾರಿಕೆ ಸಲಹೆಗಾರನಿಗೆ ನೋಂದಣಿಗಾಗಿ ಕಳಿಸತಕ್ಕದು.

(5) ಕರಾರಿನಲ್ಲಿ ಉಮೇದುವಾರನೆಂದು ವರ್ಣಿತನಾಗಿರುವ ವ್ಯಕ್ತಿಯು ಕರಾರಿನಲ್ಲಿ ನಿರ್ದಿಷ್ಟಗೊಳಿಸಲಾದ ಹೆಸರಿಸಲಾದ ವ್ಯಾಪಾರದಲ್ಲಿ ಈ ಅಧಿನಿಯಮದ ಮೇರೆಗೆ ಉಮೇದುವಾರನಾಗಿ ಉಮೇದುವಾರಿಕೆ ತರಬೇತಿಯನ್ನು ಪಡೆಯುವುದಕ್ಕಾಗಿ ನೇಮಕಗೊಳ್ಳಲು ಅರ್ಹನಾಗಿದ್ದಾನೆಂದು ಉಮೇದುವಾರಿಕೆ ಸಲಹೆಗಾರನಿಗೆ ಮನದಟ್ಟಾದ ಹೊರತು, ಉಮೇದುವಾರಿಕೆ ಕರಾರನ್ನು ಅವನು ನೋಂದಾಯಿಸತಕ್ಕುದಲ್ಲ.

(6) ಕೇಂದ್ರ ಸರ್ಕಾರವು ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಡನೆ ಸಮಾಲೋಚನೆ ಮಾಡಿದ ಅನಂತರ, ಅಂಥ ತರಬೇತಿ ಪಡೆಯುತ್ತಿರುವ ಉಮೇದುವಾರರ ಯಾವುದೇ ಪ್ರವರ್ಗದ ಉಮೇದುವಾರಿಕೆ ತರಬೇತಿಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ವ್ಯತ್ಯಾಸಗೊಳಿಸಿ ಯಾವುದೇ ನಿಯಮವನ್ನು ಮಾಡಿದಲ್ಲಿ, ಆಗ ಆ ಪ್ರವರ್ಗದ ಉಮೇದುವಾರರಿಗೆ ಸಂಬಂಧಿಸಿದ ಹಾಗೂ ಅಂಥ ನಿಯಮವನ್ನು ಮಾಡುವ ನಿಕಟ ಪೂರ್ವದಲ್ಲಿ ಇದ್ದಂಥ ಉಮೇದುವಾರಿಕೆಯ ಪ್ರತಿಯೊಂದು ಕರಾರಿನ ನಿಬಂಧನೆಗಳು ಮತ್ತು ಷರತ್ತುಗಳು ತದನುಸಾರವಾಗಿ ಮಾರ್ಪಾಟಾಗಿವೆ ಎಂದು ಭಾವಿಸತಕ್ಕದು.

5. ಉಮೇದುವಾರಿಕೆಯ ಹೊಸ ಕರಾರು :— ಯಾವ ನಿಯೋಜಕನೊಂದಿಗೆ ಉಮೇದುವಾರಿಕೆಯ ಕರಾರನ್ನು ಮಾಡಿಕೊಳ್ಳಲಾಗಿದೆಯೋ ಆ ನಿಯೋಜಕನು ಕರಾರಿನ ಮೇರೆಗಿನ ತನ್ನ ಬಾಧ್ಯತೆಗಳನ್ನು ಪೂರೈಸಲು ಯಾವುದೇ ಕಾರಣಕ್ಕಾಗಿ ಅಸಮರ್ಥನಾದಲ್ಲಿ, ಮತ್ತು ಉಮೇದುವಾರಿಕೆಯ ಸಲಹೆಗಾರನ ಅನುಮೋದನೆಯನ್ನು ಪಡೆದು, ಉಮೇದುವಾರಿಕೆ ತರಬೇತಿಯ ಉಳಿದ ಅವಧಿಯವರೆಗೆ ಬೇರೊಬ್ಬ ನಿಯೋಜಕನ ಕೈಕೆಳಗೆ ಉಮೇದುವಾರನಾಗಿ ನೇಮಕಗೊಳತಕ್ಕದೆಂದು ನಿಯೋಜಕನು, ಉಮೇದುವಾರನು ಅಥವಾ ಅವನ ಪಾಲಕನು ಮತ್ತು ಇತರ ಯಾವನೇ ನಿಯೋಜಕನು ತಮ್ಮೊಳಗೆ ಒಪ್ಪಂದ ಮಾಡಿಕೊಂಡಿರುವಲ್ಲಿ, ಆ ಒಪ್ಪಂದವನ್ನು ಉಮೇದುವಾರಿಕೆ ಸಲಹೆಗಾರನ ಹತ್ತಿರ ನೋಂದಾಯಿಸಿದ ಮೇಲೆ, ಅದನ್ನು ಉಮೇದುವಾರನ ಅಥವಾ ಅವನ ಪಾಲಕನ ಮತ್ತು ಬೇರೊಬ್ಬ ನಿಯೋಜಕನ ನಡುವೆ ಆಗಿರುವ ಉಮೇದುವಾರಿಕೆಯ ಕರಾರು ಎಂದು ಭಾವಿಸತಕ್ಕದು, ಮತ್ತು ಅಂಥ ನೊಂದಣಿಯಾದ ದಿನಾಂಕದಂದು ಮತ್ತು ದಿನಾಂಕದಿಂದ ಮೊದಲಿನ ನಿಯೋಜಕನೊಂದಿಗೆ ಮಾಡಿಕೊಂಡಿದ್ದ ಉಮೇದುವಾರಿಕೆಯ ಕರಾರು ಕೊನೆಗೊಳ್ಳತಕ್ಕದು ಮತ್ತು ಕರಾರಿನ ಯಾವುದೇ ಪಕ್ಷದ ಕೋರಿಕೆಯ ಮೇರೆಗೆ ಅದರ ಬೇರೊಂದು ಪಕ್ಷದ ವಿರುದ್ಧ ಆ ಕರಾರಿನ ಮೇರೆಗೆ ಯಾವುದೇ ಬಾಧ್ಯತೆಯನ್ನು ಜಾರಿ ಮಾಡುವಂತಿಲ್ಲ.

6. ಉಮೇದುವಾರಿಕೆ ತರಬೇತಿಯ ಅವಧಿ:—ಉಮೇದುವಾರಿಕೆಯ ಕರಾರಿನಲ್ಲಿ ನಿರ್ದಿಷ್ಟಪಡಿಸತಕ್ಕ ಉಮೇದುವಾರಿಕೆ ತರಬೇತಿಯ ಅವಧಿಯು ಕೆಳಕಂಡಂತಿರತಕ್ಕದು :—

(ಕ) ರಾಷ್ಟ್ರೀಯ ಪರಿಷತ್ತಿನಿಂದ ಮನ್ನಣೆ ಪಡೆದ ಶಾಲೆಯಲ್ಲಿ ಅಥವಾ ಇತರ ಸಂಸ್ಥೆಯಲ್ಲಿ ಸಾಂಸ್ಥಿಕ ತರಬೇತಿಯನ್ನು ಪಡೆದು, ಆ ಪರಿಷತ್ತು ಅಥವಾ ಆ ಪರಿಷತ್ತಿನಿಂದ ಮನ್ನಣೆ ಪಡೆದ ಸಂಸ್ಥೆಯು ನಡೆಸಿದ ವ್ಯಾಪಾರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವ್ಯಾಪಾರ ಉಮೇದುವಾರರ ಸಂದರ್ಭದಲ್ಲಿ, ಉಮೇದುವಾರಿಕೆ ತರಬೇತಿಯ ಅವಧಿಯು ಆ ಪರಿಷತ್ತು ನಿರ್ಧರಿಸಬಹುದಾದಷ್ಟು ಇರತಕ್ಕದು;

(ಕಕ) ತಾಂತ್ರಿಕ ಶಿಕ್ಷಣ ಮಂಡಲಿಗೆ ಅಥವಾ ರಾಜ್ಯ ಪರಿಷತ್ತಿಗೆ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಇತರ ಯಾವುದೇ ಪ್ರಾಧಿಕಾರಕ್ಕೆ ಸಂಲಗ್ನವಾದ ಅಥವಾ ಅದರ ಮನ್ನಣೆಯನ್ನು ಪಡೆದ ಶಾಲೆಯಲ್ಲಿ ಅಥವಾ ಇತರ ಸಂಸ್ಥೆಯಲ್ಲಿ ಸಾಂಸ್ಥಿಕ ತರಬೇತಿಯನ್ನು ಪಡೆದು ಆ ಮಂಡಲಿಯು ಅಥವಾ ರಾಜ್ಯ ಪರಿಷತ್ತು ಅಥವಾ ಪ್ರಾಧಿಕಾರವು ನಡೆಸಿದ ವ್ಯಾಪಾರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವ್ಯಾಪಾರ ಉಮೇದುವಾರರ ಸಂದರ್ಭದಲ್ಲಿ, ಉಮೇದುವಾರಿಕೆ ತರಬೇತಿಯ ಅವಧಿಯು ನಿಯಮಿಸಬಹುದಾದಷ್ಟು ಇರತಕ್ಕದು;

(ಖ) ಇತರ ವ್ಯಾಪಾರ ಉಮೇದುವಾರರ ಸಂದರ್ಭದಲ್ಲಿ, ಉಮೇದುವಾರಿಕೆ ತರಬೇತಿಯ ಅವಧಿಯು ನಿಯಮಿಸಬಹುದಾದಷ್ಟು ಇರತಕ್ಕದು;

(ಗ) ಪದವೀಧರ ಅಥವಾ ತಾಂತ್ರಿಕ ಉಮೇದುವಾರರ ಸಂದರ್ಭದಲ್ಲಿ ಉಮೇದುವಾರಿಕೆ ತರಬೇತಿಯ ಅವಧಿಯು ನಿಯಮಿಸಬಹುದಾದಷ್ಟು ಇರತಕ್ಕದು.

7. ಉಮೇದುವಾರಿಕೆ ಕರಾರು ಕೊನೆಗೊಳ್ಳುವುದು :—(1) ಉಮೇದುವಾರಿಕೆಯ ಕರಾರು, ಉಮೇದುವಾರಿಕೆ ತರಬೇತಿಯ ಅವಧಿಯು ಮುಕ್ತಾಯವಾದಂದು ಕೊನೆಗೊಳ್ಳತಕ್ಕದು.

(2) ಉಮೇದುವಾರಿಕೆ ಕರಾರಿನ ಯಾವುದೇ ಪಕ್ಷವು ಕರಾರನ್ನು ಕೊನೆಗೊಳಿಸುವುದಕ್ಕಾಗಿ ಉಮೇದುವಾರಿಕೆ ಸಲಹೆಗಾರನಿಗೆ ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಅಂಥ ಅರ್ಜಿಯನ್ನು ಸಲ್ಲಿಸಿದಾಗ, ಅದರ ಒಂದು ಪ್ರತಿಯನ್ನು ಕರಾರಿನ ಇನ್ನೊಂದು ಪಕ್ಷಕ್ಕೆ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(3) ಅರ್ಜಿಯ ಒಳಾಂಶಗಳನ್ನು ಮತ್ತು ಇನ್ನೊಂದು ಪಕ್ಷವು ಮಾಡಿದ ಆಕ್ಷೇಪಗಳೇನಾದರೂ ಇದ್ದರೆ, ಅವುಗಳನ್ನು, ಪರ್ಯಾಲೋಚಿಸಿದ ಅನಂತರ, ಕರಾರಿನ ಪಕ್ಷಗಳು ಅಥವಾ ಅವರಲ್ಲಿ ಯಾರಾದರೂ ಕರಾರಿನ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕಾರ್ಯಗತಗೊಳಿಸು ವಲ್ಲಿ ವಿಫಲರಾಗಿದ್ದಾರೆಂದು ಮತ್ತು ಪಕ್ಷಗಳ ಅಥವಾ ಅವರಲ್ಲಿ ಯಾರೊಬ್ಬರ ಹಿತಾಸಕ್ತಿಗಳ ದೃಷ್ಟಿಯಿಂದ ಅದನ್ನು ಕೊನೆಗೊಳಿಸುವುದು ಅಪೇಕ್ಷಣೀಯವೆಂದು ಉಮೇದುವಾರಿಕೆ ಸಲಹೆಗಾರನಿಗೆ ಮನದಟ್ಟಾದರೆ, ಅವನು ಲಿಖಿತ ಆದೇಶದ ಮೂಲಕ ಆ ಕರಾರನ್ನು ಕೊನೆಗೊಳಿಸ ಬಹುದು :

ಪರಂತು,

(ಕ) ಕರಾರಿನ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕಾರ್ಯಗತಗೊಳಿಸಲು ನಿಯೋಜಕನು ವಿಫಲನಾದುದರಿಂದ ಕರಾರು ಕೊನೆಗೊಂಡಿರುವಲ್ಲಿ, ನಿಯಮಿಸಬಹುದಾದಂಥ ನಷ್ಟ ಪರಿಹಾರವನ್ನು ನಿಯೋಜಕನು ಉಮೇದುವಾರನಿಗೆ ಸಂದಾಯ ಮಾಡತಕ್ಕದ್ದು;

(ಖ) ಉಮೇದುವಾರನು ಹಾಗೆ ವಿಫಲನಾದುದರಿಂದ ಕರಾರು ಕೊನೆಗೊಂಡಿರುವಲ್ಲಿ, ಉಮೇದುವಾರಿಕೆ ಸಲಹೆಗಾರನು ನಿರ್ಧರಿಸಬಹು ದಾದಷ್ಟು ಮೊಬಲಗನ್ನು ತರಬೇತಿಯ ಖರ್ಚೆಂದು ಉಮೇದುವಾರನು ಅಥವಾ ಅವನ ಪಾಲಕನು ನಿಯೋಜಕನಿಗೆ ಮರುಪಾವತಿ ಮಾಡತಕ್ಕದ್ದು.

8. ಹೆಸರಿಸಲಾದ ವ್ಯಾಪಾರದ ಬಗ್ಗೆ ಉಮೇದುವಾರರ ಸಂಖ್ಯೆ.—(1) ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಡನೆ ಸಮಾಲೋಚಿಸಿದ ನಂತರ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ, ಹೆಸರಿಸಲಾದ ಪ್ರತಿಯೊಂದು ವ್ಯಾಪಾರದ ಬಗ್ಗೆ, ಆ ವ್ಯಾಪಾರದಲ್ಲಿನ ಅಕುಶಲ ಕೆಲಸಗಾರರಲ್ಲದ ಕೆಲಸಗಾರರ ಮತ್ತು ವ್ಯಾಪಾರ ಉಮೇದುವಾರರ ಅನುಪಾತವನ್ನು ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಈ ಉಪ-ಪ್ರಕರಣದ ಮೇರೆಗೆ ನಿರ್ಧರಿಸಲಾದ ಅನುಪಾತಕ್ಕಿಂತ ಹೆಚ್ಚಿನ ಸಂಖ್ಯೆಯ ವ್ಯಾಪಾರ ಉಮೇದುವಾರರನ್ನು ನೇಮಿಸದಂತೆ ಯಾವನೇ ನಿಯೋಜಕನನ್ನು ಪ್ರತಿಬಂಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1) ನೇ ಉಪ–ಪ್ರಕರಣದ ಮೇರೆಗೆ ಅನುಪಾತವನ್ನು ನಿರ್ಧರಿಸುವಲ್ಲಿ, ಸಂಬಂಧಪಟ್ಟ ಹೆಸರಿಸಲಾದ ವ್ಯಾಪಾರದಲ್ಲಿ ಈ ಅಧಿನಿಯಮದ ಮೇರೆಗೆ ಉಮೇದುವಾರಿಕೆ ತರಬೇತಿಗಾಗಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಮತ್ತು (3ಕ) ಉಪ–ಪ್ರಕರಣದ ಮೇರೆಗೆ ಕೇಂದ್ರ ಉಮೇದುವಾರಿಕೆ ಸಲಹೆಗಾರನು ಅಥವಾ ಆ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಇತರ ವ್ಯಕ್ತಿಯು ನಿಯೋಜಕನಿಗೆ ಕೊಟ್ಟ ಯಾವುದೇ ನೋಟೀಸಿಗೆ ಅನುಗುಣ ವಾಗಿ ಪಧವೀಧರ ಅಥವಾ ತಾಂತ್ರಿಕ ಉಮೇದುವಾರರು, ಯಾರಾದರೂ ಇದ್ದರೆ ಅವರ ತರಬೇತಿಗಾಗಿ ಅವನು ದೊರಕಿಸಿಕೊಡಬಹುದಾದ ಸೌಲಭ್ಯಗಳ ಬಗ್ಗೆ ಕೇಂದ್ರ ಸರ್ಕಾರವು ಗಮನ ಕೊಡತಕ್ಕದ್ದು.

(3) ಉಮೇದುವಾರಿಕೆ ಸಲಹೆಗಾರನು, ನಿಯೋಜಕನು ತನ್ನ ಕಾರ್ಯಸಂಸ್ಥೆಯಲ್ಲಿ ಯಾವುದೇ ಹೆಸರಿಸಲಾದ ವ್ಯಾಪಾರಕ್ಕಾಗಿ ಕೇಂದ್ರ ಸರ್ಕಾರವು ನಿರ್ಧರಿಸಿದಂತಹ ಅನುಪಾತದಲ್ಲಿ ವ್ಯಾಪಾರ ಉಮೇದುವಾರರನ್ನು ಆ ವ್ಯಾಪಾರದಲ್ಲಿ ಉದೇದುವಾರಿಕೆ ತರಬೇತಿಯನ್ನು ಪಡೆಯುವುದಕ್ಕಾಗಿ ನೇಮಿಸಿಕೊಳ್ಳಬೇಕೆಂದು ಲಿಖಿತ ನೋಟೀಸಿನ ಮೂಲಕ, ಅವನನ್ನು ಅಗತ್ಯಪಡಿಸಬಹುದು ಮತ್ತು ಹಾಗೆ ಅಗತ್ಯಪಡಿಸಿದುದನ್ನು ನಿಯೋಜಕನು ಪಾಲಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದನ್ನಾದರೂ ಅಗತ್ಯಪಡಿಸುವಲ್ಲಿ, ಸಂಬಂಧಪಟ್ಟ ಕಾರ್ಯಸಂಸ್ಥೆಯಲ್ಲಿ ವಾಸ್ತವವಾಗಿ ಲಭ್ಯವಾಗಿರುವ ಸೌಲಭ್ಯಗಳ ಬಗ್ಗೆ ಉಮೇದುವಾರಿಕೆ ಸಲಹೆಗಾರನು ಗಮನ ಕೊಡತಕ್ಕದ್ದು.

(3ಕ) ಕೇಂದ್ರ ಉಮೇದುವಾರಿಕೆ ಸಲಹೆಗಾರನು ಅಥವಾ ಈ ಬಗ್ಗೆ ಕೇಂದ್ರ ಉಮೇದುವಾರಿಕೆ ಸಲಹೆಗಾರನಿಂದ ಲಿಖಿತ ರೂಪದಲ್ಲಿ ಅಧಿಕೃತನಾದ ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗೆ ಕಡಿಮೆ ಇಲ್ಲದ ಇತರ ಯಾವನೇ ವ್ಯಕ್ತಿಯು—

(i) ಹೆಸರಿಸಲಾದ ವ್ಯಾಪಾರದಲ್ಲಿ ನಿಯೋಜಿತರಾದ (ತಾಂತ್ರಿಕ ಮತ್ತು ಮೇಲ್ವಿಚಾರಣಾ ವ್ಯಕ್ತಿಗಳನ್ನು ಒಳಗೊಂಡು) ವ್ಯವಸ್ಥಾಪಕ ವ್ಯಕ್ತಿಗಳ ಸಂಖ್ಯೆಯನ್ನು

(ii) ಕಾರ್ಯಸಂಸ್ಥೆಯಲ್ಲಿ ನೇಮಿಂತರಾದ ವ್ಯವಸ್ಥಾಪನಾ ತರಬೇತಿಯನ್ನು ಪಡೆಯುವವರ ಸಂಖ್ಯೆಯನ್ನು;

(iii) ಹೆಸರಿಸಲಾದ ವ್ಯಾಪಾರದಲ್ಲಿ ಲಭ್ಯವಿರುವ ಒಟ್ಟು ತರಬೇತಿ ಸೌಲಭ್ಯಗಳನ್ನು; ಮತ್ತು

(iv) ಆ ಪ್ರಸಂಗದ ಸನ್ನಿವೇಶಗಳಲ್ಲಿ ಸೂಕ್ತವೆಂದು ಅವನು ಪರಿಗಣಿಸಬಹುದಾದಂಥ ಇತರ ಅಂಶಗಳನ್ನು;

—ಗಮನಿಸಿ, ಲಿಖಿತ ನೋಟೀಸಿನ ಮೂಲಕ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯ ಪದವೀಧರರಿಗೆ ಅಥವಾ ತಾಂತ್ರಿಕ ಉಮೇದುವಾರರಿಗೆ ತನ್ನ ಕಾರ್ಯಸಂಸ್ಥೆಯಲ್ಲಿನ ಅಂಥ ವ್ಯಾಪಾರದಲ್ಲಿ ತರಬೇತಿಯನ್ನು ಕೊಡಲು ನಿಯೋಜಕನನ್ನು ಅಗತ್ಯಪಡಿಸತಕ್ಕದ್ದು ಮತ್ತು ಹಾಗೆ ಅಗತ್ಯಪಡಿಸಿದುದನ್ನು ನಿಯೋಜಕನು ಪಾಲಿಸತಕ್ಕದ್ದು.

ವಿವರಣೆ :— ಈ ಉಪಪ್ರಕರಣದಲ್ಲಿ "ವ್ಯವಸ್ಥಾಪನಾ ತರಬೇತಿಯನ್ನು ಪಡೆಯುವವ" ಎಂಬ ಪದಾವಳಿಗೆ, ನಿಯೋಜಕನ ಕಾರ್ಯ ಸಂಸ್ಥೆಯಲ್ಲಿ (ಈ ಅಧಿನಿಯಮದ ಮೇರೆಗೆ ಉಮೇದುವಾರಿಕೆ ತರಬೇತಿಯಲ್ಲದ) ತರಬೇತಿಯನ್ನು ಪಡೆಯುವುದಕ್ಕಾಗಿ ನಿಯೋಜಕನಿಂದ ನೇಮಿಂತನಾಗಿರುವ ಮತ್ತು ಅಂಥ ತರಬೇತಿಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿದ ಅನಂತರ ಅಂಥ ವ್ಯಕ್ತಿಯು ನಿಯಮಿತವಾದ ಆಧಾರದ ಮೇಲೆ ನಿಯೋಜಕನಿಂದ ನೇಮಕವಾಗತಕ್ಕದೆಂಬ ಷರತ್ತಿಗೆ ಒಳಪಟ್ಟಿರುವ ಯಾವನೇ ವ್ಯಕ್ತಿ ಎಂದು ಅರ್ಥ.

(4) ಹಲವು ನಿಯೋಜಕರು, ತಮ್ಮ ಅಧೀನದಲ್ಲಿರುವ ಉಮೇದುವಾರರಿಗೆ ಪ್ರಾಯೋಗಿಕ ತರಬೇತಿಯನ್ನು ಕೊಡುವ ಉದ್ದೇಶಕ್ಕಾಗಿ ಅವರನ್ನು ತಮ್ಮ ಕಾರ್ಯಸಂಸ್ಥೆಗಳಲ್ಲಿ ಪರಸ್ಪರ ಬದಲಿಸಿಕೊಳ್ಳುವುದರ ಮೂಲಕ ಒಟ್ಟುಗೂಡಿಸಬಹುದು.

(5) ಕೇಂದ್ರ ಸರ್ಕಾರದಿಂದ ನಿರ್ಧರಿತವಾದ ಅನುಪಾತಕ್ಕಿಂತ ಹೆಚ್ಚು ಸಂಖ್ಯೆಯ ಅಥವಾ (3ಕ) ಉಪ-ಪ್ರಕರಣದ ಮೇರೆಗೆ ಹೊರಡಿಸ ಲಾದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ್ದಕ್ಕಿಂತ ಹೆಚ್ಚು ಸಂಖ್ಯೆಯ ಉಮೇದುವಾರರಿಗೆ ತರಬೇತಿಯನ್ನು ಕೊಡತಕ್ಕದೆಂದು ಸಾರ್ವಜನಿಕ ಹಿತಾಸಕ್ತಿ ಯನ್ನು ಗಮನದಲ್ಲಿರಿಸಿಕೊಂಡು, ಸಮುಚಿತ ಸರ್ಕಾರವು ಅಭಿಪ್ರಾಯಪಡುವಲ್ಲಿ, ಹೆಚ್ಚು ಸಂಖ್ಯೆಯ ಉಮೇದುವಾರರಿಗೆ ತರಬೇತಿ ಕೊಡಬೇಕೆಂದು ಆ ಸಮುಚಿತ ಸರ್ಕಾರವು ನಿಯೋಜಕರನ್ನು ಅಗತ್ಯಪಡಿಸಬಹುದು.

(6) ಹೆಚ್ಚಿನ ಸಂಖ್ಯೆಯ ಉಮೇದುವಾರ ತರಬೇತಿಗಾಗಿ ಅವಶ್ಯವೆಂದು ಉಮೇದುವಾರಿಕೆ ಸಲಹೆಗಾರನು ಪರ್ಯಾಲೋಚಿಸುವಂಥ ಹೆಚ್ಚಿನ ಸೌಲಭ್ಯಗಳನ್ನು ಮತ್ತು ಅಂಥ ಹೆಚ್ಚಿನ ಆರ್ಥಿಕ ಸಹಾಯವನ್ನು ಸಂಬಂಧಪಟ್ಟ ಸರ್ಕಾರವು ಒದಗಿಸಿಕೊಟ್ಟರೆ, ಮೇಲೆ ಹೇಳಿದಂತೆ ಯಾವ ನಿಯೋಜಕನನ್ನು ಅಗತ್ಯಪಡಿಸಲಾಗಿದೆಯೋ ಆ ಪ್ರತಿಯೊಬ್ಬ ನಿಯೋಜಕನು ಹಾಗೆ ಅಗತ್ಯಪಡಿಸಿದುದನ್ನು ಪಾಲಿಸತಕ್ಕದ್ದು.

(7) 6ನೇ ಉಪ-ಪ್ರಕರಣದ ಮೇರೆಗೆ ಉಮೇದುವಾರಿಕೆ ಸಲಹೆಗಾರನು ಕೊಟ್ಟ ತೀರ್ಮಾನದ ಬಗ್ಗೆ ಸಮಾಧಾನವನ್ನು ಹೊಂದಿರದ ಯಾವನೇ ನಿಯೋಜಕನು ಕೇಂದ್ರ ಉಮೇದುವಾರಿಕೆ ಪರಿಷತ್ತಿಗೆ ನಿವೇದಿಸಿಕೊಳ್ಳಬಹುದು ಮತ್ತು ಅಂಥ ನಿವೇದನೆಯನ್ನು ಆ ಉದ್ದೇಶಕ್ಕಾಗಿ ಪರಿಷತ್ತಿನಿಂದ ನೇಮಿತವಾದ ಸಮಿತಿಯು ನಿರ್ಧರಿಸತಕ್ಕದು ಮತ್ತು ಆ ಸಮಿತಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದು.

9. ಉಮೇದುವಾರರ ಪ್ರಾಯೋಗಿಕ ಮತ್ತು ಮೂಲ ತರಬೇತಿ :—(1) ಉಮೇದುವಾರಿಕೆ ಸಲಹೆಗಾರನಿಂದ ಅನುಮೋದಿತವಾದ ಕಾರ್ಯಕ್ರಮಕ್ಕನುಸಾರವಾಗಿ, ತನ್ನಿಂದ ನೇಮಿತನಾದ ಪ್ರತಿಯೊಬ್ಬ ಉಮೇದುವಾರನಿಗೆ ತನ್ನ ಕಾರ್ಯಾಗಾರದ ಪ್ರಾಯೋಗಿಕ ತರಬೇತಿಯನ್ನು ಕೊಡಲು ಪ್ರತಿಯೊಬ್ಬ ನಿಯೋಜಕನು ಸೂಕ್ತ ಏರ್ಪಾಡುಗಳನ್ನು ಮಾಡತಕ್ಕದು.

(2) ಕೇಂದ್ರ ಉಮೇದುವಾರಿಕೆ ಸಲಹೆಗಾರನಿಗೆ ಅಥವಾ ಕೇಂದ್ರ ಉಮೇದುವಾರಿಕೆ ಸಲಹೆಗಾರನಿಂದ ಈ ಬಗ್ಗೆ ಲಿಖಿತ ಮೂಲಕ ಅಧಿಕೃತವಾದ ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗಿಂತ ಕಡಿಮೆ ಇಲ್ಲದ ಇತರ ಯಾವನೇ ವ್ಯಕ್ತಿಗೆ, ಉಮೇದುವಾರನ ಕೆಲಸವನ್ನು ಪರೀಕ್ಷಿಸುವ ದೃಷ್ಟಿಯಿಂದ ಹಾಗೂ ಅನುಮೋದಿತ ಕಾರ್ಯಕ್ರಮಕ್ಕನ್ನುಸಾರವಾಗಿ, ಪ್ರಾಯೋಗಿಕ ತರಬೇತಿಯನ್ನು ಕೊಡಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂಥ ಪ್ರತಿಯೊಬ್ಬ ಉಮೇದುವಾರನೊಂದಿಗೆ ಸಂಪರ್ಕ ಹೊಂದುವುದಕ್ಕಾಗಿ ಯುಕ್ತವಾದ ಎಲ್ಲ ಸೌಲಭ್ಯಗಳನ್ನು ಒದಗಿಸತಕ್ಕದು:

ಪರಂತು, ರಾಜ್ಯ ಉಮೇದುವಾರಿಕೆ ಸಲಹೆಗಾರನಿಗೂ ಅಥವಾ ರಾಜ್ಯ ಉಮೇದುವಾರಿಕೆ ಸಲಹೆಗಾರನಿಂದ ಈ ಬಗ್ಗೆ ಲಿಖಿತ ಮೂಲಕ ಅಧಿಕೃತವಾದ ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗಿಂತ ಕಡಿಮೆಯಿಲ್ಲದ ಇತರ ಯಾವನೇ ವ್ಯಕ್ತಿಗೂ ಸಹ, ಸಮುಚಿತ ಸರ್ಕಾರವು ರಾಜ್ಯ ಸರ್ಕಾರವಾಗಿರುವಾಗ ಅದಕ್ಕೆ ಸಂಬಂಧಿಸಿ ತರಬೇತಿ ಹೊಂದುತ್ತಿರುವ ಉಮೇದುವಾರರ ಸಂಬಂಧದಲ್ಲಿ ಅಂಥ ಎಲ್ಲ ಸೌಲಭ್ಯಗಳನ್ನೂ ಒದಗಿಸತಕ್ಕದು.

(3) ರಾಷ್ಟ್ರೀಯ ಪರಿಷತ್ತಿನಿಂದ ಮನ್ನಣೆ ಪಡೆದ ಶಾಲೆಯಲ್ಲಿ ಅಥವಾ ಇತರ ಸಂಸ್ಥೆಯಲ್ಲಿ ಅಥವಾ ತಾಂತ್ರಿಕ ಶಿಕ್ಷಣದ ಮಂಡಲಿಗೆ ಅಥವಾ ರಾಜ್ಯ ಪರಿಷತ್ತಿಗೆ ಅಥವಾ ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ಪ್ರಾಧಿಕಾರಕ್ಕೆ ಸಂಲಗ್ನವಾದ ಅಥವಾ ಅದರಿಂದ ಮನ್ನಣೆ ಪಡೆದ ಇತರ ಯಾವುದೇ ಸಂಸ್ಥೆಯಲ್ಲಿ ಸಾಂಸ್ಥಿಕ ತರಬೇತಿಯನ್ನು ಪಡೆಯದಿರುವಂಥ ವ್ಯಾಪಾರ ಉಮೇದುವಾರರು, ಪ್ರಾಯೋಗಿಕ ತರಬೇತಿಗಾಗಿ ಕಾರ್ಯಾಗಾರಕ್ಕೆ ಸೇರುವ ಮುಂಚೆ, ಮೂಲ ತರಬೇತಿಯ ಶಿಕ್ಷಣವನ್ನು ಪಡೆಯತಕ್ಕದು.

(4) ನಿಯೋಜಕನು ಐದುನೂರು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರನ್ನು ತನ್ನ ಕಾರ್ಯಸಂಸ್ಥೆಯಲ್ಲಿ ನಿಯೋಜಿಸಿಕೊಂಡಿರುವಲ್ಲಿ ಕಾರ್ಯಾಗಾರ ಕಟ್ಟಡದ ಪ್ರತ್ಯೇಕ ಭಾಗಗಳಲ್ಲಾಗಲೀ ಅಥವಾ ನಿಯೋಜಕನು ಸ್ವತಃ ಏರ್ಪಾಟು ಮಾಡಿರುವ ಕಟ್ಟಡದಲ್ಲಾಗಲಿ ವ್ಯಾಪಾರ ಉಮೇದುವಾರರಿಗೆ ಮೂಲ ತರಬೇತಿಯನ್ನು ಕೊಡತಕ್ಕದು ಆದರೆ ಅಂಥ ಪ್ರತ್ಯೇಕ ಕಟ್ಟಡದ ಭೂಮಿಯ ಬೆಲೆ, ನಿರ್ಮಾಣದ ಮತ್ತು ಸಲಕರಣೆಗಳ ಖರ್ಚನ್ನು ಭರಿಸುವ ಬಗ್ಗೆ ಸರಳ ನಿಬಂಧನೆಗಳ ಮೇಲೆ ಮತ್ತು ಸುಲಭ ಕಂತುಗಳಲ್ಲಿ ಮರು ಸಂದಾಯ ಮಾಡಬಹುದಾದಂಥ ಸಾಲವನ್ನು ಸಮುಚಿತ ಸರ್ಕಾರವು ನಿಯೋಜಕನಿಗೆ ಮಂಜೂರು ಮಾಡಬಹುದು.

(4ಕ) 4ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಐದು ನೂರು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರು ನಿಯೋಜಿತರಾಗಿರುವ ಯಾವುದೇ ಕಾರ್ಯಸಂಸ್ಥೆಯಲ್ಲಿ ತರಬೇತಿಯನ್ನು ಹೊಂದಬೇಕಾದ ಉಮೇದುವಾರರ ಸಂಖ್ಯೆಯು ಯಾವುದೇ ಕಾಲದಲ್ಲಿ ಹನ್ನೆರಡಕ್ಕಿಂತ ಕಡಿಮೆ ಇದ್ದರೆ, ಅಂಥ ಕಾರ್ಯಸಂಸ್ಥೆಗೆ ಸಂಬಂಧಿಸಿದ ನಿಯೋಜಕನು ಆ ಎಲ್ಲಾ ಉಮೇದುವಾರರನ್ನು ಅಥವಾ ಅವರಲ್ಲಿ ಎಷ್ಟು ಮಂದಿಯನ್ನಾದರೂ ಯಾವುದೇ ಹೆಸರಿಸಲಾದ ವ್ಯಾಪಾರದಲ್ಲಿ ಮೂಲ ತರಬೇತಿಯನ್ನು ಪಡೆಯಲು ಸರ್ಕಾರವು ನಡೆಸುತ್ತಿರುವ ಯಾವುದೇ ಮೂಲ ತರಬೇತಿ ಕೇಂದ್ರಕ್ಕೆ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಗೆ ನಿಯೋಗಿಸಬಹುದು.

(4ಖ) (4ಕ) ಉಪಪ್ರಕರಣದ ಮೇರೆಗೆ ನಿಯೋಜಕನು ಯಾವನೇ ಉಮೇದುವಾರನನ್ನು ನಿಯೋಗಿಸಿದಲ್ಲಿ, ಅಂಥ ನಿಯೋಜಕನು, ಅಂಥ ತರಬೇತಿಗಾಗಿ ಸರ್ಕಾರವು ವಹಿಸಿದ ವೆಚ್ಚಗಳನ್ನು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ, ಸರ್ಕಾರಕ್ಕೆ ಸಂದಾಯಮಾಡತಕ್ಕದು.

(5) ನಿಯೋಜಕನು ತನ್ನ ಕಾರ್ಯಸಂಸ್ಥೆಯಲ್ಲಿ ಐದು ನೂರಕ್ಕಿಂತ ಕಡಿಮೆ ನೌಕರರನ್ನು ನಿಯೋಜಿಸಿಕೊಂಡಿರುವಲ್ಲಿ, ವ್ಯಾಪಾರ ಉಮೇದುವಾರರಿಗೆ ಸರ್ಕಾರವು ಏರ್ಪಾಡು ಮಾಡಿರುವ ತರಬೇತಿ ಸಂಸ್ಥೆಗಳಲ್ಲಿ ಮೂಲ ತರಬೇತಿಯನ್ನು ಕೊಡತಕ್ಕದು.

(6) ಯಾವುದೇ ಪ್ರದೇಶದಲ್ಲಿನ ಅತ್ಯಂತ ಸೂಕ್ತವಾದ ಕಾರ್ಯಸಂಸ್ಥೆಯ ಆವರಣಗಳೊಳಗೆ ಅಥವಾ ಇತರ ಯಾವುದೇ ಅನುಕೂಲವಾದ ಸ್ಥಳದಲ್ಲಿ ಸ್ಥಾಪಿತವಾಗಿರತಕ್ಕ ಯಾವುದೇ ತರಬೇತಿ ಸಂಸ್ಥೆಯಲ್ಲಿ ಇಬ್ಬರು ಅಥವಾ ಹೆಚ್ಚು ನಿಯೋಜಕರಿಂದ ನೇಮಿತರಾದ ವ್ಯಾಪಾರ ಉಮೇದುವಾರರಿಗೆ ಮೂಲ ತರಬೇತಿಯನ್ನು ಕೊಡಬಹುದು.

(7) ಪದವೀಧರ ಅಥವಾ ತಾಂತ್ರಿಕ ಉಮೇದುವಾರನಲ್ಲದ ಇತರ ಉಮೇದುವಾರನ ಸಂದರ್ಭದಲ್ಲಿ ಮೂಲ ತರಬೇತಿಯನ್ನೊಳಗೊಂಡ ಪ್ರಾಯೋಗಿಕ ತರಬೇತಿಯ ಪಠ್ಯ ವಿಷಯವು ಮತ್ತು ಅದಕ್ಕಾಗಿ ಉಪಯೋಗಿಸಬೇಕಾದ ಸಲಕರಣೆಯು, ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂತೆ ಇರತಕ್ಕದು.

(7ಕ) ಪದವೀಧರ ಅಥವಾ ತಾಂತ್ರಿಕ ಉಮೇದುವಾರರ ಸಂದರ್ಭದಲ್ಲಿ ಉಮೇದುವಾರಿಕೆ ತರಬೇತಿ ಕಾರ್ಯಕ್ರಮವು ಮತ್ತು ಎಂಜಿನಿಯರಿಂಗ್ ಅಥವಾ ತಂತ್ರ ವಿಜ್ಞಾನದ ಯಾವುದೇ ವಿಷಯ ಕ್ಷೇತ್ರದಲ್ಲಿನ ಅಂಥ ತರಬೇತಿಗೆ ಅಗತ್ಯವಾಗಿರುವ ಸೌಲಭ್ಯಗಳು, ಕೇಂದ್ರ ಸರ್ಕಾರವು ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಂದಿಗೆ ಸಮಾಲೋಚಿಸಿ ಅನುಮೋದಿಸಬಹುದಾದಂಥವುಗಳಾಗಿರತಕ್ಕದು.

(8ಕ) 6ನೇ ಪ್ರಕರಣದ (ಕ) ಮತ್ತು (ಕಕ) ಖಂಡಗಳಲ್ಲಿ ಉಲ್ಲೇಖಿಸಲಾದವರಲ್ಲದ ಇತರ ವ್ಯಾಪಾರ ಉಮೇದುವಾರರಿಗೆ' ಮೂಲ ತರಬೇತಿಯನ್ನೊಳಗೊಂಡು, ಕೊಡಲಾದ ಪ್ರಾಯೋಗಿಕ ತರಬೇತಿಗೆ ಸಂಬಂಧಿಸಿ, ನಿಯೋಜಕನಿಗೆ ತಗುಲಿದ (ವೃತ್ತಿವೇತನಗಳ ಖರ್ಚನ್ನು ಒಳಗೊಂಡು) ಆವರ್ತಕ ಖರ್ಚುಗಳನ್ನು.—

(i) ಅಂಥ ನಿಯೋಜಕನು ಐದು ನೂರು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರನ್ನು ನಿಯೋಜಿಸಿಕೊಂಡಿದ್ದರೆ, ನಿಯೋಜಕನು; ವಹಿಸತಕ್ಕದು.

(ii) ಅಂಥ ನಿಯೋಜಕನು ಐದು ನೂರಕ್ಕಿಂತ ಕಡಿಮೆ ಕೆಲಸಗಾರರನ್ನು ನಿಯೋಜಿಸಿ ಕೊಂಡಿದ್ದರೆ, ಕೇಂದ್ರ ಸರ್ಕಾರವು ವಿಧಿಸಬಹುದಾದಂಥ ಮಿತಿಯವರೆಗೆ ನಿಯೋಜಕನು ಮತ್ತು ಸರ್ಕಾರವು ಸಮಭಾಗಗಳಲ್ಲಿ, ಮತ್ತು ಆ ಮಿತಿಯನ್ನು ಮೀರಿದರೆ, ಅದನ್ನು ನಿಯೋಜಕನೊಬ್ಬನೇ ವಹಿಸತಕ್ಕದು, ಮತ್ತು

(ಖ) 6ನೇ ಪ್ರಕರಣದ (ಕ) ಮತ್ತು (ಕಕ) ಖಂಡಗಳಲ್ಲಿ ಉಲ್ಲೇಖಿತರಾದ ವ್ಯಾಪಾರ ಉಮೇದುವಾರರಿಗೆ, ಮೂಲ ತರಬೇತಿಯನ್ನೊಳಗೊಂಡು, ಕೊಡಲಾದ ಪ್ರಾಯೋಗಿಕ ತರಬೇತಿಗೆ ಸಂಬಂಧಿಸಿ, ನಿಯೋಜಕನಿಗೆ ತಗುಲಿದ (ವೃತ್ತಿ ವೇತನಗಳನ್ನೊಳಗೊಂಡು ) ಆವರ್ತಕ ಖರ್ಚುಗಳೇನಾದರೂ ಇದ್ದರೆ ಅವನ್ನು, ಪ್ರತಿಯೊಂದು ಸಂದರ್ಭದಲ್ಲೂ, ನಿಯೋಜಕನು ವಹಿಸತಕ್ಕದು ;

(ಗ) ಪದವೀಧರ ಅಥವಾ ತಾಂತ್ರಿಕ ಉಮೇದುವಾರರಿಗೆ ಕೊಡಲಾದ ಪ್ರಾಯೋಗಿಕ ತರಬೇತಿಗೆ ಸಂಬಂಧಿಸಿ ನಿಯೋಜಕನಿಗೆ ತಗುಲಿದ (ವೃತ್ತಿ ವೇತನಗಳ ಖರ್ಚನ್ನು ಹೊರತುಪಡಿಸಿ) ಆವರ್ತಕ ಖರ್ಚುಗಳನ್ನು ನಿಯೋಜಕನು ವಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ವಿಧಿಸಬಹುದಾದಂಥ ಮಿತಿಯವರೆಗೆ ವೃತ್ತಿವೇತನಗಳ ಖರ್ಚನ್ನು ಕೇಂದ್ರ ಸರ್ಕಾರವು ಮತ್ತು ನಿಯೋಜಕನು ಸಮಭಾಗಗಳಲ್ಲಿ ವಹಿಸತಕ್ಕದ್ದು ಮತ್ತು ಆ ಮಿತಿಯನ್ನು ಮೀರಿದರೆ, ಅದನ್ನು ನಿಯೋಜಕನೊಬ್ಬನೇ ವಹಿಸತಕ್ಕದ್ದು.

10. ಉಮೇದುವಾರರ ಸಂಬಂಧಿತ ಶಿಕ್ಷಣ :— (1) ಕಾರ್ಯಸಂಸ್ಥೆಯಲ್ಲಿ ಪ್ರಾಯೋಗಿಕ ತರಬೇತಿಯನ್ನು ಪಡೆಯುತ್ತಿರುವ ವ್ಯಾಪಾರ ಉಮೇದುವಾರನಿಗೆ ಕುಶಲಕರ್ಮಿಯಾಗಿ ಸಂಪೂರ್ಣ ಅರ್ಹತೆಯನ್ನು ಪಡೆಯುವ ಸಲುವಾಗಿ ವ್ಯಾಪಾರ ಉಮೇದುವಾರನಿಗೆ ಅಗತ್ಯವಿರುವಂಥ ಸೈದ್ಧಾಂತಿಕ ಜ್ಞಾನವನ್ನು ಅವನಿಗೆ ಕೊಡುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಂದಿಗೆ ಸಮಾಲೋಚಿಸಿ ಅನುಮೋದಿಸಿದ (ವ್ಯಾಪಾರಕ್ಕೆ ಸಮುಚಿತವಾಗಿರತಕ್ಕ) ಸಂಬಂಧಿತ ಶಿಕ್ಷಣದ ವಿಷಯ ಕ್ರಮವನ್ನು ಪ್ರಾಯೋಗಿಕ ತರಬೇತಿಯ ಅವಧಿಯಲ್ಲಿ ಬೋಧಿಸತಕ್ಕದ್ದು.

(2) ಸಂಬಂಧಿತ ಶಿಕ್ಷಣವನ್ನು ಸಮುಚಿತ ಸರ್ಕಾರದ ಖರ್ಚಿನಲ್ಲಿ ಕೊಡತಕ್ಕದ್ದು, ಆದರೆ ಅಂಥ ಶಿಕ್ಷಣವನ್ನು ಕೊಡುವುದಕ್ಕಾಗಿ ಎಲ್ಲ ಸೌಲಭ್ಯಗಳನ್ನು ಹಾಗೆ ಅಗತ್ಯಪಡಿಸಲಾದಾಗ ನಿಯೋಜಕನು ಒದಗಿಸತಕ್ಕದ್ದು.

(3) ಸಂಬಂಧಿತ ಶಿಕ್ಷಣದ ತರಗತಿಗಳಿಗೆ ಹಾಜರಾಗುವುದಕ್ಕಾಗಿ ವ್ಯಾಪಾರ ಉಮೇದುವಾರನು ವಿನಿಯೋಗಿಸಿದ ಯಾವುದೇ ಕಾಲವನ್ನು ಅವನ ಸವೇತನ ಕೆಲಸದ ಅವಧಿಯ ಭಾಗವೆಂದು ಪರಿಗಣಿಸತಕ್ಕದ್ದು.

(4) ಸಾಂಸ್ಥಿಕ ತರಬೇತಿಯ ವ್ಯಾಸಂಗವನ್ನು ಪಡೆದ ಅನಂತರ, ರಾಷ್ಟ್ರೀಯ ಪರಿಷತ್ತು ನಡೆಸಿದ ವ್ಯಾಪಾರ ಪರೀಕ್ಷೆಗಳಲ್ಲಿ ಅಥವಾ ತಾಂತ್ರಿಕ ಶಿಕ್ಷಣ ಮಂಡಲಿ ಅಥವಾ ರಾಜ್ಯ ಪರಿಷತ್ತು ಅಥವಾ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಇತರ ಯಾವುದೇ ಪ್ರಾಧಿಕಾರವು ನಡೆಸುವ ವ್ಯಾಪಾರ ತರಬೇತಿಗಳಲ್ಲಿ ಹಾಗೂ ಉತ್ತೀರ್ಣರಾದ ವ್ಯಾಪಾರ ಉಮೇದುವಾರರ ಸಂದರ್ಭದಲ್ಲಿ, ನಿಯಮಿಸಬಹುದಾದಂಥ ಕಡಿಮೆ ಮಾಡಲಾದ ಅಥವಾ ಮಾರ್ಪಾಟುಗೊಳಿಸಲಾದ ಪ್ರಮಾಣದಲ್ಲಿ ಸಂಬಂಧಿತ ಶಿಕ್ಷಣವನ್ನು ಕೊಡಬಹುದು.

(5) ಯಾವನೇ ವ್ಯಕ್ತಿಯು, ತಾಂತ್ರಿಕ ಸಂಸ್ಥೆಯಲ್ಲಿನ ತನ್ನ ವ್ಯಾಸಂಗದ ಅವಧಿಯಲ್ಲಿ ಪದವೀಧರ ಅಥವಾ ತಾಂತ್ರಿಕ ಉಮೇದುವಾರನಾಗಿದ್ದಲ್ಲಿ ಮತ್ತು ತನ್ನ ಉಮೇದುವಾರಿಕೆಯ ತರಬೇತಿಯ ಅವಧಿಯಲ್ಲಿ ಅವನು ಸಂಬಂಧಿತ ಶಿಕ್ಷಣವನ್ನು ಪಡೆಯಬೇಕಾಗಿರುವಲ್ಲಿ, ಆಗ ಕೇಂದ್ರ ಉಮೇದುವಾರಿಕೆ ಸಲಹೆಗಾರನು ಅಥವಾ ಈ ಬಗ್ಗೆ ಕೇಂದ್ರ ಉಮೇದುವಾರಿಕೆ ಸಲಹೆಗಾರನಿಂದ ಲಿಖಿತ ಮೂಲಕ ಅಧಿಕೃತನಾದ, ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗಿಂತ ಕಡಿಮೆಯಿರದ ಇತರ ಯಾವನೇ ವ್ಯಕ್ತಿಯು, ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಅಂಥ ಸಂಸ್ಥೆಯಲ್ಲಿ ಸಂಬಂಧಿತ ಶಿಕ್ಷಣವನ್ನು ಪಡೆಯಲು ನಿಯೋಜಕನು ಅವನನ್ನು ಪ್ರಾಯೋಗಿಕ ತರಬೇತಿಯಿಂದ ಬಿಡುಗಡೆ ಮಾಡತಕ್ಕದ್ದು.

11. ನಿಯೋಜಕರ ಬಾಧ್ಯತೆಗಳು :— ಈ ಅಧಿನಿಯಮದ ಇತರ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಉಮೇದುವಾರನ ಸಂಬಂಧದಲ್ಲಿ ಪ್ರತಿಯೊಬ್ಬ ನಿಯೋಜಕನಿಗೆ ಕೆಳಕಂಡ ಬಾಧ್ಯತೆಗಳಿರತಕ್ಕದ್ದು, ಎಂದರೆ :—

(ಕ) ಈ ಅಧಿನಿಯಮದ ಉಪಬಂಧಗಳಿಗೆ, ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅನುಸಾರವಾಗಿ, ತನ್ನ ವ್ಯಾಪಾರದಲ್ಲಿ ಉಮೇದುವಾರನಿಗೆ ತರಬೇತಿಯನ್ನು ಒದಗಿಸುವುದು;

(ಖ) ಆ ವ್ಯಾಪಾರದಲ್ಲಿ ನಿಯೋಜಕನು ಸ್ವತಃ ಅರ್ಹತೆಯನ್ನು ಹೊಂದಿರದಿದ್ದರೆ, ಉಮೇದುವಾರನ ತರಬೇತಿಯನ್ನು ನೋಡಿಕೊಳ್ಳಲು ನಿಯಮಿಸಲಾದ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಯು ಇದ್ದಾನೆಂಬುದನ್ನು ಖಚಿತಪಡಿಸಿಕೊಳ್ಳುವುದು ; ಮತ್ತು

(ಗ) ಉಮೇದುವಾರಿಕೆಯ ಕರಾರಿನ ಮೇರೆಗೆ ತನ್ನ ಬಾಧ್ಯತೆಗಳನ್ನು ಕಾರ್ಯಗತಗೊಳಿಸುವುದು.

12. ಉಮೇದುವಾರರ ಬಾಧ್ಯತೆಗಳು :—(1) ಉಮೇದುವಾರಿಕೆ ತರಬೇತಿಯನ್ನು ಪಡೆಯುತ್ತಿರುವ ಪ್ರತಿಯೊಬ್ಬ ವ್ಯಾಪಾರ ಉಮೇದವಾರನು ಕೆಳಕಂಡ ಬಾಧ್ಯತೆಗಳನ್ನು ಹೊಂದಿರತಕ್ಕದ್ದು, ಎಂದರೆ :—

(ಕ) ತರಬೇತಿಯ ಅವಧಿಯು ಮುಕ್ತಾಯವಾಗುವ ಮುಂಚೆ ತನ್ನ ವ್ಯಾಪಾರವನ್ನು ಮನಃಪೂರ್ವಕವಾಗಿ ಮತ್ತು ತತ್ಪರತೆಯಿಂದ ಕಲಿಯುವುದು ಮತ್ತು ಕುಶಲಕರ್ಮಿಯಾಗಿ ಅರ್ಹತೆಯನ್ನು ಪಡೆಯಲು ಪರಿಶ್ರಮಿಸುವುದು;

(ಖ) ಪ್ರಾಯೋಗಿಕ ಮತ್ತು ಶಿಕ್ಷಣ ತರಗತಿಗಳಲ್ಲಿ ನಿಯತವಾಗಿ ಹಾಜರಿರುವುದು ;

(ಗ) ಕಾರ್ಯಸಂಸ್ಥೆಯಲ್ಲಿನ ತನ್ನ ನಿಯೋಜಕನ ಮತ್ತು ವರಿಷ್ಠರ ಎಲ್ಲ ಕಾನೂನುಬದ್ಧ ಆದೇಶಗಳನ್ನು ಕಾರ್ಯಗತಗೊಳಿಸುವುದು ; ಮತ್ತು

(ಘ) ಉಮೇದುವಾರಿಕೆಯ ಕರಾರಿನ ಮೇರೆಗಿನ ತನ್ನ ಎಲ್ಲ ಬಾಧ್ಯತೆಗಳನ್ನು ಕಾರ್ಯಗತಗೊಳಿಸುವುದು.

(2) ಉಮೇದುವಾರಿಕೆಯ ತರಬೇತಿಯನ್ನು ಪಡೆಯುತ್ತಿರುವ ಪ್ರತಿಯೊಬ್ಬ ಪದವೀಧರ ಅಥವಾ ತಾಂತ್ರಿಕ ಉಮೇದುವಾರನು ಕೆಳಕಂಡ ಬಾಧ್ಯತೆಗಳನ್ನು ಹೊಂದಿರತಕ್ಕದ್ದು, ಎಂದರೆ :—

(ಕ) ಎಂಜಿನಿಯರಿಂಗ್‌ನಲ್ಲಿನ ಅಥವಾ ತಂತ್ರ ವಿಜ್ಞಾನದಲ್ಲಿನ ತನ್ನ ವಿಷಯ ಕ್ಷೇತ್ರವನ್ನು ಮನಃಪೂರ್ವಕವಾಗಿ ಮತ್ತು ತತ್ಪರತೆಯಿಂದ ತನ್ನ ತರಬೇತಿ ಸ್ಥಳದಲ್ಲಿ ಕಲಿಯುವುದು;

(ಖ) ಪ್ರಾಯೋಗಿಕ ಮತ್ತು ಶಿಕ್ಷಣ ತರಗತಿಗಳಲ್ಲಿ ನಿಯತವಾಗಿ ಹಾಜರಿರುವುದು;

(ಗ) ಕಾರ್ಯ ಸಂಸ್ಥೆಯಲ್ಲಿನ ತನ್ನ ನಿಯೋಜಕನ ಮತ್ತು ವರಿಷ್ಠರ ಎಲ್ಲ ಕಾನೂನುಬದ್ಧ ಆದೇಶಗಳನ್ನು ಕಾರ್ಯಗತಗೊಳಿಸುವುದು;

(ಘ) ನಿಯಮಿಸಬಹುದಾದಂತೆ ತನ್ನ ಕೆಲಸಕ್ಕೆ ಸಂಬಂಧಿಸಿದಂಥ ದಾಖಲೆಗಳನ್ನು ಇಟ್ಟುಕೊಂಡು ಬರುವುದನ್ನು ಒಳಗೊಂಡು, ಉಮೇದುವಾರಿಕೆ ಕರಾರಿನ ಮೇರೆಗಿನ ತನ್ನ ಬಾಧ್ಯತೆಗಳನ್ನು ಕಾರ್ಯಗತಗೊಳಿಸುವುದು.

13. ಉಮೇದುವಾರರಿಗೆ ಸಂದಾಯ :—(1) ನಿಯೋಜಕನು ಪ್ರತಿಯೊಬ್ಬ ಉಮೇದುವಾರನಿಗೆ ಉಮೇದುವಾರಿಕೆ ತರಬೇತಿಯ ಅವಧಿಯಲ್ಲಿ, ನಿಯಮಿಸಲಾದ ಕನಿಷ್ಠ ದರ ಅಥವಾ ಅಂಥ ಉಮೇದುವಾರನನ್ನು ಒಳಗೊಳ್ಳುವ ಉಮೇದುವಾರರ ಪ್ರವರ್ಗಕ್ಕೆ 1970ರ ಜನವರಿ 1ರಂದು ನಿಯೋಜಕನು ಸಂದಾಯ ಮಾಡುತ್ತಿದ್ದ ದರ, ಇವುಗಳಲ್ಲಿ ಯಾವುದು ಹೆಚ್ಚೋ, ಆ ದರಕ್ಕೆ ಕಡಿಮೆಯಾಗದ ದರದಲ್ಲಿ ಉಮೇದುವಾರಿಕೆ ಕರಾರಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವೃತ್ತಿ ವೇತನವನ್ನು ನಿಯಮಿಸಬಹುದಾದಂಥ ಅವಧಿಯ ಅಂತರಗಳಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಸಂದಾಯ ಮಾಡತಕ್ಕದ್ದು.

(2) ನಿಯೋಜಕನು ಉಮೇದುವಾರನಿಗೆ ಬಿಡಿ ಕೆಲಸದ ಆಧಾರದ ಮೇಲೆ ಹಣವನ್ನು ಸಂದಾಯ ಮಾಡತಕ್ಕದ್ದಲ್ಲ ಮತ್ತು ಉತ್ಪಾದನಾ ಬೋನಸ್ ಅಥವಾ ಇತರ ಪ್ರೋತ್ಸಾಹಕ ಯೋಜನೆಯಲ್ಲಿ ಭಾಗವಹಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ.

14. ಉಮೇದುವಾರರ ಆರೋಗ್ಯ, ಸುರಕ್ಷಿತತೆ ಮತ್ತು ಕಲ್ಯಾಣ:—ಯಾರಾದರೂ ಉಮೇದುವಾರರು ಒಂದು ಕಾರ್ಖಾನೆಯಲ್ಲಿ ತರಬೇತಿ ಪಡೆಯುತ್ತಿರುವಲ್ಲಿ, ಕಾರ್ಖಾನೆ ಅಧಿನಿಯಮ, 1948ರ (1948ರ 63ರ, IIIನೇ, IVನೇ ಮತ್ತು Vನೇ ಅಧ್ಯಾಯಗಳ ಉಪಬಂಧಗಳು ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಅವರು ಕೆಲಸಗಾರರಾಗಿದ್ದರೆ ಹೇಗೋ ಹಾಗೆ, ಉಮೇದುವಾರರ ಆರೋಗ್ಯಕ್ಕೆ, ಸುರಕ್ಷಿತತೆಗೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿ ಅನ್ವಯಿಸತಕ್ಕದ್ದು ಮತ್ತು ಯಾರಾದರೂ ಉಮೇದುವಾರರು ಗಣಿಯಲ್ಲಿ ತರಬೇತಿಯನ್ನು ಪಡೆಯುತ್ತಿರುವಲ್ಲಿ ಗಣಿ ಅಧಿನಿಯಮ, 1952ರ (1952ರ 35) Vನೇ ಅಧ್ಯಾಯದ ಉಪಬಂಧಗಳು, ಅವರು ಗಣಿಯಲ್ಲಿ ನೇಮಿತರಾದ ವ್ಯಕ್ತಿಗಳಾಗಿದ್ದರೆ ಹೇಗೋ ಹಾಗೆ ಉಮೇದುವಾರರ ಆರೋಗ್ಯಕ್ಕೆ ಮತ್ತು ಸುರಕ್ಷಿತತೆಗೆ ಸಂಬಂಧಿಸಿ ಅನ್ವಯಿಸತಕ್ಕದ್ದು.

15. ಕೆಲಸದ ವೇಳೆ, ಅಧಿಕ ಕಾಲ, ರಜೆ ಮತ್ತು ರಜಾ ದಿನಗಳು :—(1) ಉಮೇದುವಾರನು ಕಾರ್ಯಾಗಾರದಲ್ಲಿ ಪ್ರಾಯೋಗಿಕ ತರಬೇತಿಯನ್ನು ಪಡೆಯುತ್ತಿರುವಾಗ ಅವನ ವಾರದ ಪ್ರತಿದಿನದ ಕೆಲಸದ ವೇಳೆಯು ನಿಯಮಿಸಬಹುದಾದಂತಿರತಕ್ಕದ್ದು.

(2) ಉಮೇದುವಾರಿಕೆ ಸಲಹೆಗಾರನ ಅನುಮತಿಯ ಹೊರತು, ಯಾವ ಉಮೇದುವಾರನನ್ನು ಅಧಿಕ ಕಾಲ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಅದಕ್ಕೆ ಅವಕಾಶವನ್ನು ಕೊಡತಕ್ಕದ್ದಲ್ಲ ಆದರೆ ಅಂಥ ಅಧಿಕಕಾಲ ಕೆಲಸವು ಉಮೇದುವಾರನ ತರಬೇತಿಯ ಹಿತದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಇದೆಯೆಂದು ಆ ಉಮೇದುವಾರಿಕೆ ಸಲಹೆಗಾರನಿಗೆ ಮನದಟ್ಟಾದ ಹೊರತು ಅವನು ಅನುಮತಿಯನ್ನು ಕೊಡತಕ್ಕದ್ದಲ್ಲ.

(3) ನಿಯಮಿಸಬಹುದಾದಂಥ ರಜೆಗೆ ಮತ್ತು ಅವನು ಯಾವ ಕಾರ್ಯಸಂಸ್ಥೆಯಲ್ಲಿ ತರಬೇತಿಯನ್ನು ಪಡೆಯುತ್ತಿರುವನೋ ಆ ಕಾರ್ಯಸಂಸ್ಥೆಯಲ್ಲಿ ಆಚರಿಸುತ್ತಿರುವಂಥ ರಜಾದಿನಗಳಿಗೆ ಉಮೇದುವಾರನು ಹಕ್ಕುಳ್ಳವನಾಗಿರತಕ್ಕದ್ದು.

16. ಕ್ಷತಿಗಾಗಿ ನಷ್ಟ ಪರಿಹಾರವನ್ನು ಕೊಡಲು ನಿಯೋಜಕನ ಹೊಣೆಗಾರಿಕೆ :— ಉಮೇದುವಾರನಾಗಿ ತರಬೇತಿಯನ್ನು ಪಡೆಯುತ್ತಿರುವುದರಿಂದ ಉಂಟಾದ ಅಥವಾ ಆ ಕಾಲದಲ್ಲಿನ ಅಪಘಾತದ ಮೂಲಕವಾಗಿ ಉಮೇದುವಾರನಿಗೆ ದೈಹಿಕ ಕ್ಷತಿಯುಂಟಾದರೆ, ಕೆಲಸಗಾರರ ಪರಿಹಾರ ಅಧಿನಿಯಮ, 1923ರ ಉಪಬಂಧಗಳಿಗೆ ಅನುಸಾರವಾಗಿ (ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಮಾರ್ಪಾಟುಗಳಿಗೆ ಒಳಪಟ್ಟು), ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ನಿರ್ಧರಿಸಬೇಕಾದ ಮತ್ತು ಸಂದಾಯವಾಗಬೇಕಾದ ನಷ್ಟ ಪರಿಹಾರವನ್ನು ಕೊಡಲು ಅವನ ನಿಯೋಜಕನು ಹೊಣೆಗಾರನಾಗಿರತಕ್ಕದ್ದು.

17. ನಡತೆ ಮತ್ತು ಶಿಸ್ತು :—ನಡತೆಯ ಮತ್ತು ಶಿಸ್ತಿನ ಎಲ್ಲ ವಿಷಯಗಳಲ್ಲೂ, ಉಮೇದುವಾರನು, ತರಬೇತಿಯನ್ನು ಪಡೆಯುತ್ತಿರುವ ಕಾರ್ಯಸಂಸ್ಥೆಯಲ್ಲಿನ ಸಂವಾದಿ ಪ್ರವರ್ಗದ ನಿಯೋಜಿತರಿಗೆ ಅನ್ವಯವಾಗುವ ನಿಯಮಗಳ ಮತ್ತು ವಿನಿಯಮಗಳ ಮೂಲಕ ಉಮೇದುವಾರನು ನಿಯಂತ್ರಿತನಾಗತಕ್ಕದ್ದು.

18. ಉಮೇದುವಾರರು ತರಬೇತಿ ಪಡೆಯುವವರೇ ಹೊರತು ಕೆಲಸಗಾರರಲ್ಲ :—ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, —

(ಕ) ಒಂದು ಕಾರ್ಯಸಂಸ್ಥೆಯಲ್ಲಿನ ಹೆಸರಿಸಲಾದ ವ್ಯಾಪಾರದಲ್ಲಿ ತರಬೇತಿಯನ್ನು ಪಡೆಯುತ್ತಿರುವ ಪ್ರತಿಯೊಬ್ಬ ಉಮೇದುವಾರನೂ ತರಬೇತಿ ಪಡೆಯುವವನಾಗಿರತಕ್ಕದ್ದೇ ಹೊರತು ಕೆಲಸಗಾರನಾಗಿರತಕ್ಕದ್ದಲ್ಲ; ಮತ್ತು

(ಖ) ಕಾರ್ಮಿಕರಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಉಪಬಂಧಗಳು ಅಂಥ ಉಮೇದುವಾರರಿಗೆ ಅಥವಾ ಅವನಿಗೆ ಸಂಬಂಧಿಸಿ ಅನ್ವಯಿಸತಕ್ಕದ್ದಲ್ಲ.

19. ದಾಖಲೆಗಳು ಮತ್ತು ವಿವರಪಟ್ಟಿಕೆಗಳು :— (1) ಪ್ರತಿಯೊಬ್ಬ ನಿಯೋಜಕನೂ, ತನ್ನ ಕಾರ್ಯಸಂಸ್ಥೆಯಲ್ಲಿ ತರಬೇತಿಯನ್ನು ಪಡೆಯುತ್ತಿರುವ ಪ್ರತಿಯೊಬ್ಬ ಉಮೇದುವಾರನ ತರಬೇತಿಯ ಬಗೆಗಿನ ದಾಖಲೆಗಳನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಇಟ್ಟುಕೊಂಡು ಬರತಕ್ಕದ್ದು.

(2) ಅಂಥ ಪ್ರತಿಯೊಬ್ಬ ನಿಯೋಜಕನು ಸಹ, ನಿಯಮಿಸಬಹುದಾದ ಅಂಥ ಮಾಹಿತಿಯನ್ನು ಮತ್ತು ವಿವರಪಟ್ಟಿಕೆಯನ್ನು ಅಂಥ ನಮೂನೆಯಲ್ಲಿ ಅಂಥ ಅಧಿಕಾರಿಗಳಿಗೆ ಮತ್ತು ಅಂಥ ಅವಧಿಯ ಅಂತರಗಳಲ್ಲಿ ಒದಗಿಸತಕ್ಕದ್ದು.

20. ವಿವಾದಗಳನ್ನು ಬಗೆಹರಿಸುವುದು :—(1) ಉಮೇದುವಾರಿಕೆ ಕರಾರಿನಿಂದ ನಿಯೋಜಕನ ಮತ್ತು ಉಮೇದುವಾರನ ನಡುವೆ ಉದ್ಭವಿಸುವ ಯಾವುದೇ ಭಿನ್ನಾಭಿಪ್ರಾಯವನ್ನು ಅಥವಾ ವಿವಾದವನ್ನು ತೀರ್ಮಾನಕ್ಕಾಗಿ ಉಮೇದುವಾರಿಕೆ ಸಲಹೆಗಾರನಿಗೆ ಕಳುಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಉಮೇದುವಾರಿಕೆ ಸಲಹೆಗಾರನು ಕೊಟ್ಟ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂಥ ತೀರ್ಮಾನವನ್ನು ತನಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಆ ತೀರ್ಮಾನದ ವಿರುದ್ಧ ಉಮೇದುವಾರಿಕೆ ಪರಿಷತ್ತಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲನ್ನು ಆ ಉದ್ದೇಶಕ್ಕಾಗಿ ನೇಮಿತವಾದ ಆ ಪರಿಷತ್ತಿನ ಸಮಿತಿಯು ಸುನಾವಣೆ ಮಾಡತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

(3) (2)ನೇ ಉಪ-ಪ್ರಕರಣದ ಮೇರೆಗೆ ಸಮಿತಿಯು ಕೊಟ್ಟ ತೀರ್ಮಾನವು ಮತ್ತು ಅಂಥ ತೀರ್ಮಾನಕ್ಕೆ ಮಾತ್ರ ಒಳಪಟ್ಟು, (1 ನೇ ಉಪ-ಪ್ರಕರಣದ ಮೇರೆಗೆ ಉಮೇದುವಾರಿಕೆ ಸಲಹೆಗಾರರು ಕೊಟ್ಟ ತೀರ್ಮಾನವು ಅಂತಿಮವಾದುದಾಗಿರತಕ್ಕುದು.

21. ಪರೀಕ್ಷೆಯನ್ನು ನಡೆಸುವುದು ಮತ್ತು ಪ್ರಮಾಣ ಪತ್ರವನ್ನು ಕೊಡುವುದು ಹಾಗೂ ತರಬೇತಿಯ ಮಂಕ್ನಾಯ :—(1) ತರಬೇತಿಯ ಅವಧಿಯನ್ನು ಪೂರ್ತಿಗೊಳಿಸಿರುವ ಪ್ರತಿಯೊಬ್ಬ ವ್ಯಾಪಾರ ಉಮೇದುವಾರನೂ, ಅವನು ತನ್ನ ಉಮೇದುವಾರಿಕೆಯನ್ನು ಯಾವ ಹೆಸರಿಸಲಾದ ವ್ಯಾಪಾರದಲ್ಲಿ ಪಡೆದಿರುವನೋ ಅದರಲ್ಲಿನ ಅವನ ಪ್ರಾವೀಣ್ಯವನ್ನು ನಿರ್ಧರಿಸಲು ರಾಷ್ಟ್ರೀಯ ಪರಿಷತ್ತು ನಡೆಸುವ ಪರೀಕ್ಷೆಗೆ ಹಾಜರಾಗತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ಪ್ರತಿಯೊಬ್ಬ ವ್ಯಾಪಾರ ಉಮೇದುವಾರನಿಗೂ ವ್ಯಾಪಾರದಲ್ಲಿನ ಪ್ರಾವೀಣ್ಯದ ಬಗ್ಗೆ ರಾಷ್ಟ್ರೀಯ ಪರಿಷತ್ತು ಪ್ರಮಾಣಪತ್ರವನ್ನು ಕೊಡತಕ್ಕುದು.

(3) ಪ್ರತಿಯೊಬ್ಬ ಪದವೀಧರ ಅಥವಾ ತಾಂತ್ರಿಕ ಉಮೇದುವಾರನ ಉಮೇದುವಾರಿಕೆ ತರಬೇತಿಯಲ್ಲಿನ ಪ್ರಗತಿಯನ್ನು ನಿಯೋಜಕನು ಕಾಲಕಾಲಕ್ಕೆ ನಿರ್ಧರಿಸತಕ್ಕುದು.

(4) ಕೇಂದ್ರ ಉಮೇದುವಾರಿಕೆ ಪರಿಷತ್ತಿಗೆ ಸಮಾಧಾನವಾಗುವಂತೆ ತನ್ನ ಉಮೇದುವಾರಿಕೆ ತರಬೇತಿಯನ್ನು ಪೂರ್ತಿಗೊಳಿಸುವ ಪ್ರತಿಯೊಬ್ಬ ಪದವೀಧರ ಅಥವಾ ತಾಂತ್ರಿಕ ಉಮೇದುವಾರನಿಗೆ ಪ್ರಾವೀಣ್ಯ ಪ್ರಮಾಣಪತ್ರವನ್ನು ಆ ಪರಿಷತ್ತು ಕೊಡತಕ್ಕುದು.

22. ನಿಯೋಜನೆಯ ನೀಡಿಕೆ ಮತ್ತು ಒಪ್ಪಿಗೆ :—(1) ತನ್ನ ಕಾರ್ಯ ಸಂಸ್ಥೆಯಲ್ಲಿ ಉಮೇದುವಾರಿಕೆಯ ತರಬೇತಿ ಅವಧಿಯನ್ನು ಪೂರ್ತಿಗೊಳಿಸಿರುವ ಯಾವನೇ ಉಮೇದುವಾರನಿಗೆ ಯಾವುದೇ ನಿಯೋಜನೆಯನ್ನು ನೀಡಬೇಕಾದ ಬಾಧ್ಯತೆಯು ನಿಯೋಜಕನಿಗೆ ಇರತಕ್ಕುದಲ್ಲ ಅಥವಾ ನಿಯೋಜಕನ ಕೈಕೆಳಗೆ ನಿಯೋಜನೆಯನ್ನು ಒಪ್ಪಿಕೊಳ್ಳಬೇಕಾದ ಬಾಧ್ಯತೆಯು ಉಮೇದುವಾರನಿಗಿರತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಉಮೇದುವಾರನು ಉಮೇದುವಾರಿಕೆ ತರಬೇತಿಯನ್ನು ತೃಪ್ತಿಕರವಾಗಿ ಪೂರ್ತಿಗೊಳಿಸಿದ ಅನಂತರ, ನಿಯೋಜಕನ ಕೈಕೆಳಗೆ ಸೇವೆ ಸಲ್ಲಿಸತಕ್ಕುದೆಂಬ ಷರತ್ತು ಉಮೇದುವಾರಿಕೆ ಕರಾರಿನಲ್ಲಿ ಇರುವಲ್ಲಿ ಹಾಗೆ ಪೂರ್ತಿಗೊಳಿಸಿದ ಮೇಲೆ ಉಮೇದುವಾರನಿಗೆ ಸೂಕ್ತ ನಿಯೋಜನೆಯನ್ನು ನೀಡಲು ನಿಯೋಜಕನು ಬದ್ಧನಾಗಿರತಕ್ಕುದು ಮತ್ತು ಆ ಕರಾರಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಪರಿಶ್ರಮ ಧನದಮೇಲೆ ನಿಯೋಜಕನ ಕೈಕೆಳಗೆ ಸೇವೆಯನ್ನು ಸಲ್ಲಿಸಲು ಉಮೇದುವಾರನು ಬದ್ಧನಾಗಿರತಕ್ಕುದು:

ಪರಂತು ಅಂಥ ಅವಧಿಯು ಅಥವಾ ಪರಿಶ್ರಮ ಧನವು ಯುಕ್ತವಾಗಿಲ್ಲವೆಂದು ಉಮೇದುವಾರಿಕೆ ಸಲಹೆಗಾರನು ಅಭಿಪ್ರಾಯಪಟ್ಟಲ್ಲಿ ಅದು ಯುಕ್ತವಾಗುವಂತೆ ಮಾಡಲು ಅಂಥ ಅವಧಿಯನ್ನು, ಅಥವಾ ಪರಿಶ್ರಮಧನವನ್ನು ಅವನು ಪರಿಷ್ಕರಿಸಬಹುದು. ಮತ್ತು ಹಾಗೆ ಪರಿಷ್ಕರಿಸಲಾದ ಅವಧಿಯನ್ನು ಅಥವಾ ಪರಿಶ್ರಮಧನವನ್ನು ಉಮೇದುವಾರನು ಮತ್ತು ನಿಯೋಜಕನು ಒಪ್ಪಿಕೊಂಡಿರುವ ಅವಧಿಯೆಂದು ಅಥವಾ ಪರಿಶ್ರಮ ಧನವೆಂದು ಭಾವಿಸತಕ್ಕುದು.

## ಅಧ್ಯಾಯ—III

## ಪ್ರಾಧಿಕಾರಗಳು

23. ಪ್ರಾಧಿಕಾರಗಳು :—(1) ಸರ್ಕಾರವಲ್ಲದೆ ಅಲ್ಲದೆ, ಈ ಅಧಿನಿಯಮದ ಮೇರೆಗೆ, ಕೆಳಕಂಡ ಪ್ರಾಧಿಕಾರಗಳೂ ಇರತಕ್ಕುದು ಎಂದರೆ :—

(ಕ) ರಾಷ್ಟ್ರೀಯ ಪರಿಷತ್ತು,
(ಖ) ಕೇಂದ್ರ ಉಮೇದುವಾರಿಕೆ ಪರಿಷತ್ತು,
(ಗ) ರಾಜ್ಯ ಪರಿಷತ್ತು,
(ಘ) ರಾಜ್ಯ ಉಮೇದುವಾರಿಕೆ ಪರಿಷತ್ತು,
(ಙ) ಅಖಿಲ ಭಾರತ ಪರಿಷತ್ತು,
(ಚ) ಪ್ರಾದೇಶಿಕ ಮಂಡಲಿಗಳು,
(ಛ) ತಾಂತ್ರಿಕ ಶಿಕ್ಷಣದ ಮಂಡಲಿಗಳು ಅಥವಾ ರಾಜ್ಯ ಪರಿಷತ್ತುಗಳು,
(ಜ) ಕೇಂದ್ರ ಉಮೇದುವಾರಿಕೆ ಸಲಹೆಗಾರ, ಮತ್ತು,
(ಝ) ರಾಜ್ಯ ಉಮೇದುವಾರಿಕೆ ಸಲಹೆಗಾರ.

(2) ಪ್ರತಿಯೊಂದು ರಾಜ್ಯ ಪರಿಷತ್ತು ರಾಷ್ಟ್ರೀಯ ಪರಿಷತ್ತಿಗೆ ಸಂಲಗ್ನವಾಗಿರತಕ್ಕುದು ಮತ್ತು ಪ್ರತಿಯೊಂದು ರಾಜ್ಯ ಉಮೇದುವಾರಿಕೆ ಪರಿಷತ್ತು ಕೇಂದ್ರ ಉಮೇದುವಾರಿಕೆ ಪರಿಷತ್ತಿಗೆ ಸಂಲಗ್ನವಾಗಿರತಕ್ಕುದು.

(2ಕ) ತಾಂತ್ರಿಕ ಶಿಕ್ಷಣದ ಪ್ರತಿಯೊಂದು ಮಂಡಲಿಯು ಅಥವಾ ರಾಜ್ಯ ಪರಿಷತ್ತು ಹಾಗೂ ಪ್ರತಿಯೊಂದು ಪ್ರಾದೇಶಿಕ ಮಂಡಲಿಯು ಕೇಂದ್ರ ಉಮೇದುವಾರಿಕೆ ಪರಿಷತ್ತಿಗೆ ಸಂಲಗ್ನವಾಗಿರತಕ್ಕುದು.

(3) (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಾಧಿಕಾರಗಳಲ್ಲಿ ಪ್ರತಿಯೊಂದೂ ಈ ಅಧಿನಿಯಮದ ಮೇರೆಗಿನ ಉಮೇದುವಾರಿಕೆ ತರಬೇತಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ಸರ್ಕಾರವು ಅದಕ್ಕೆ ವಹಿಸಿಕೊಡುವಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

ಪರಂತು, ರಾಷ್ಟ್ರೀಯ ಪರಿಷತ್ತು ವಹಿಸಿಕೊಡುವಂಥ ಪ್ರಕಾರ್ಯಗಳನ್ನು ಸಹ ರಾಜ್ಯ ಪರಿಷತ್ತು ನೆರವೇರಿಸತಕ್ಕುದು ಮತ್ತು ಕೇಂದ್ರ ಉಮೇದುವಾರಿಕೆ ಪರಿಷತ್ತು ತನಗೆ ವಹಿಸಿಕೊಡುವಂಥ ಪ್ರಕಾರ್ಯಗಳನ್ನು ಸಹ ರಾಜ್ಯ ಉಮೇದುವಾರಿಕೆ ಪರಿಷತ್ತು ಮತ್ತು ತಾಂತ್ರಿಕ ಶಿಕ್ಷಣದ ಮಂಡಲಿ ಅಥವಾ ರಾಜ್ಯ ಪರಿಷತ್ತು ನೆರವೇರಿಸತಕ್ಕುದು:

24. ಪರಿಷತ್ತುಗಳ ರಚನೆ :—(1) ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಕೇಂದ್ರ ಉಮೇದುವಾರಿಕೆ ಪರಿಷತ್ತನ್ನು ಮತ್ತು ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿಅಧಿಸೂಚಿಸುವ ಮೂಲಕ ರಾಜ್ಯ ಉಮೇದುವಾರಿಕೆ ಪರಿಷತ್ತನ್ನು ಸ್ಥಾಪಿಸತಕ್ಕುದು

(2) ಕೇಂದ್ರ ಉಮೇದುವಾರಿಕೆ ಪರಿಷತ್ತಿನಲ್ಲಿ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷ ಹಾಗೂ ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ತಾನು ಕೆಳಕಂಡ ವ್ಯಕ್ತಿಗಳ ಪ್ರವರ್ಗಗಳಿಂದ ನೇಮಿಸಿಕೊಳ್ಳುವುದು ವಿಹಿತವೆಂದು ಆಲೋಚಿಸಬಹುದಾದಷ್ಟು ಸಂಖ್ಯೆಯ ಇತರ ಸದಸ್ಯರು ಇರತಕ್ಕುದು, ಎಂದರೆ :—

(ಕ) ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿರುವ ಕಾರ್ಯಸಂಸ್ಥೆಗಳಲ್ಲಿನ ನಿಯೋಜಕರ ಪ್ರತಿನಿಧಿಗಳು,

(ಖ) ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳು,

(ಗ) ಕೈಗಾರಿಕೆ, ಕಾರ್ಮಿಕ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳು, ಮತ್ತು

(ಘ) ಅಖಿಲ ಭಾರತ ಪರಿಷತ್ತಿನ ಮತ್ತು ಪ್ರಾದೇಶಿಕ ಮಂಡಲಿಗಳ ಪ್ರತಿನಿಧಿಗಳು.

(3) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರವರ್ಗಗಳಲ್ಲಿ ಪ್ರತಿಯೊಂದರಿಂದ ಕೇಂದ್ರ ಉಮೇದುವಾರಿಕೆ ಪರಿಷತ್ತಿಗೆ ಸದಸ್ಯರಾಗಿ ನೇಮಿತರಾಗಬೇಕಾದ ವ್ಯಕ್ತಿಗಳ ಸಂಖ್ಯೆ, ಪರಿಷತ್ತಿನ ಸದಸ್ಯರ ಪದಾವಧಿ, ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರು ಅನುಸರಿಸಬೇಕಾದ ಪ್ರಕ್ರಿಯೆ. ಮತ್ತು ಅವರೊಳಗೆ ಖಾಲಿಯಾಗುವ ಸ್ಥಾನಗಳನ್ನು ಭರ್ತಿ ಮಾಡುವ ರೀತಿ—ಇವು ನಿಯಮಿಸಬಹುದಾದಂತೆ ಇರತಕ್ಕುದು.

(4) ರಾಜ್ಯ ಉಮೇದುವಾರಿಕೆ ಪರಿಷತ್ತಿನಲ್ಲಿ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷ ಹಾಗೂ ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ತಾನು ಕೆಳಕಂಡ ವ್ಯಕ್ತಿಗಳ ಪ್ರವರ್ಗಗಳಿಂದ ನೇಮಿಸಿಕೊಳ್ಳುವುದು ವಿಹಿತವೆಂದು ಆಲೋಚಿಸಬಹುದಾದಷ್ಟು ಸಂಖ್ಯೆಯ ಇತರ ಸದಸ್ಯರು ಇರತಕ್ಕುದು, ಎಂದರೆ :—

(ಕ) ಸರ್ಕಾರಿ ಮತ್ತು ಖಾಸಗಿ ವಲಯಗಳ ಕಾರ್ಯಸಂಸ್ಥೆಗಳಲ್ಲಿನ ನಿಯೋಜಕರ ಪ್ರತಿನಿಧಿಗಳು,

(ಖ) ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳು,

(ಗ) ಕೈಗಾರಿಕೆ, ಕಾರ್ಮಿಕ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳು, ಮತ್ತು

(ಘ) ತಾಂತ್ರಿಕ ಶಿಕ್ಷಣದ ಮಂಡಲಿಯ ಅಥವಾ ರಾಜ್ಯ ಪರಿಷತ್ತಿನ ಪ್ರತಿನಿಧಿಗಳು.

(5) (4)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪ್ರವರ್ಗಗಳಲ್ಲಿ ಪ್ರತಿಯೊಂದರಿಂದ ರಾಜ್ಯ ಉಮೇದುವಾರಿಕೆ ಪರಿಷತ್ತಿಗೆ ಸದಸ್ಯರಾಗಿ ನೇಮಿತರಾಗಬೇಕಾದ ವ್ಯಕ್ತಿಗಳ ಸಂಖ್ಯೆ, ಪರಿಷತ್ತಿನ ಸದಸ್ಯರ ಪದಾವಧಿ, ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅವರೊಳಗೆ ಖಾಲಿಯಾಗುವ ಸ್ಥಾನಗಳನ್ನು ಭರ್ತಿ ಮಾಡುವ ರೀತಿ—ಇವು ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕುದು.

(6) ಕೇಂದ್ರ ಉಮೇದುವಾರಿಕೆ ಪರಿಷತ್ತಿನ ಅಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಿಗೆ ಹಾಗೂ ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಭತ್ಯಗಳು ಏನಾದರೂ ಇದ್ದರೆ, ಅವು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕುದು ಮತ್ತು ರಾಜ್ಯ ಉಮೇದುವಾರಿಕೆ ಪರಿಷತ್ತಿನ ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಹಾಗೂ ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಭತ್ಯಗಳು ಏನಾದರೂ ಇದ್ದರೆ ಅವು ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕುದು.

25. ಕಾರ್ಯಗಳು ಮತ್ತು ವ್ಯವಹರಣೆಗಳು ಖಾಲಿ ಸ್ಥಾನಗಳಿಂದಾಗಿ ಅಸಿಂಧುವಾಗತಕ್ಕುದಲ್ಲ :—ರಾಷ್ಟ್ರೀಯ ಪರಿಷತ್ತು, ಕೇಂದ್ರ ಉಮೇದುವಾರಿಕೆ ಪರಿಷತ್ತು, ರಾಜ್ಯ ಪರಿಷತ್ತು, ಅಥವಾ ರಾಜ್ಯ ಉಮೇದುವಾರಿಕೆ ಪರಿಷತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ವ್ಯವಹರಣೆಯನ್ನು, ಅಂಥ ಪರಿಷತ್ತಿನಲ್ಲಿ ಯಾವುದೇ ಸ್ಥಾನವು ಖಾಲಿ ಇರುವುದೆಂಬ, ಅಥವಾ ಅದರ ರಚನೆಯಲ್ಲಿ ದೋಷ ಇರುವುದೆಂಬ ಕಾರಣ ಮಾತ್ರದಿಂದ ಪ್ರಶ್ನಿಸತಕ್ಕುದಲ್ಲ.

26. ಉಮೇದುವಾರಿಕೆ ಸಲಹೆಗಾರರು :—(1) ಕೇಂದ್ರ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಸೂಕ್ತ ವ್ಯಕ್ತಿಯನ್ನು ಕೇಂದ್ರ ಉಮೇದುವಾರಿಕೆ ಸಲಹೆಗಾರನನ್ನಾಗಿ ನೇಮಿಸತಕ್ಕುದು.

(2) ರಾಜ್ಯ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಸೂಕ್ತ ವ್ಯಕ್ತಿಯನ್ನು ರಾಜ್ಯ ಉಮೇದುವಾರಿಕೆ ಸಲಹೆಗಾರನನ್ನಾಗಿ ನೇಮಿಸತಕ್ಕುದು.

(3) ಕೇಂದ್ರ ಉಮೇದುವಾರಿಕೆ ಸಲಹೆಗಾರನು ಕೇಂದ್ರ ಉಮೇದುವಾರಿಕೆ ಪರಿಷತ್ತಿನ ಕಾರ್ಯದರ್ಶಿಯಾಗಿರತಕ್ಕುದು ಮತ್ತು ರಾಜ್ಯ ಉಮೇದುವಾರಿಕೆ ಸಲಹೆಗಾರನು ರಾಜ್ಯ ಉಮೇದುವಾರಿಕೆ ಪರಿಷತ್ತಿನ ಕಾರ್ಯದರ್ಶಿಯಾಗಿರತಕ್ಕುದು.

27. ಉಪ ಮತ್ತು ಸಹಾಯಕ ಉಮೇದುವಾರಿಕೆ ಸಲಹೆಗಾರರು :—(1) ಉಮೇದುವಾರಿಕೆ ಸಲಹೆಗಾರನು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಅವನಿಗೆ ಸಹಾಯ ಮಾಡಲು ಸೂಕ್ತ ವ್ಯಕ್ತಿಗಳನ್ನು ಅಡಿಷನಲ್, ಜಂಟಿ, ಪ್ರಾದೇಶಿಕ, ಉಪ ಮತ್ತು ಸಹಾಯಕ ಉಮೇದುವಾರಿಕೆ ಸಲಹೆಗಾರನನ್ನಾಗಿ ಸರ್ಕಾರವು ನೇಮಿಸಬಹುದು.

(2) ಪ್ರತಿಯೊಬ್ಬ ಅಡಿಷನಲ್, ಜಂಟಿ, ಪ್ರಾದೇಶಿಕ, ಉಪ ಅಥವಾ ಸಹಾಯಕ ಉಮೇದುವಾರಿಕೆ ಸಲಹೆಗಾರನು ಉಮೇದುವಾರಿಕೆ ಸಲಹೆಗಾರನ ನಿಯಂತ್ರಣಕ್ಕೊಳಪಟ್ಟು, ಉಮೇದುವಾರಿಕೆ ಸಲಹೆಗಾರನು ತನಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

28. ಉಮೇದುವಾರಿಕೆ ಸಲಹೆಗಾರರು ಲೋಕ ನೌಕರರಾಗಿರತಕ್ಕುದು :—ಈ ಅಧಿನಿಯಮದ ಮೇರೆಗೆ ನೇಮಿತನಾದ ಪ್ರತಿಯೊಬ್ಬ ಉಮೇದುವಾರಿಕೆ ಸಲಹೆಗಾರನನ್ನು ಮತ್ತು ಪ್ರತಿಯೊಬ್ಬ ಅಡಿಷನಲ್, ಜಂಟಿ, ಪ್ರಾದೇಶಿಕ ಉಪ ಅಥವಾ ಸಹಾಯಕ ಉಮೇದುವಾರಿಕೆ ಸಲಹೆಗಾರನನ್ನು ಭಾರತ ದಂಡ ಸಂಹಿತೆಯ, (1860ರ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕುದು.

29. ಪ್ರವೇಶ, ಪರಿಶೀಲನೆ, ಇತ್ಯಾದಿಗಳಿಗೆ ಅಧಿಕಾರಗಳು :— (1) ಈ ಬಗ್ಗೆ ರಚಿಸಲಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಕೇಂದ್ರ ಉಮೇದುವಾರಿಕೆ ಸಲಹೆಗಾರನು ಅಥವಾ ಕೇಂದ್ರ ಉಮೇದುವಾರಿಕೆ ಸಲಹೆಗಾರನು ಈ ಬಗ್ಗೆ ಲಿಖಿತ ಮೂಲಕ ಅಧಿಕೃತಗೊಳಿಸಬಹುದಾದಂಥ ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗಿಂತ ಕಡಿಮೆ ಇರದ ಇತರ ವ್ಯಕ್ತಿಯು.—

(ಕ) ತಾನು ಸೂಕ್ತವೆಂದು ಆಲೋಚಿಸುವಂಥ ಸಹಾಯಕರು, ಯಾರಾದರೂ ಇದ್ದರೆ, ಅವರೊಂದಿಗೆ, ಯಾವುದೇ ಕಾರ್ಯಸಂಸ್ಥೆಯನ್ನು ಅಥವಾ ಅದರ ಭಾಗವನ್ನು ಯಾವುದೇ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು, ಪರಿಶೀಲಿಸಬಹುದು ಮತ್ತು ಪರೀಕ್ಷಿಸಬಹುದು;

(ಖ) ಅದರಲ್ಲಿ ನಿಯೋಜಿತನಾಗಿರುವ ಯಾವುದೇ ಉಮೇದುವಾರನನ್ನು ಪರೀಕ್ಷಿಸಬಹುದು ಅಥವಾ ಈ ಅಧಿನಿಯಮಕ್ಕೆ ಅನುಸಾರವಾಗಿ ಇಟ್ಟುಕೊಂಡು ಬಂದಿರುವ ಯಾವುದೇ ರಿಜಿಸ್ಟರನ್ನು ದಾಖಲೆಯನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಬಹುದು ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯವೆಂದು ತಾನು ಪರ್ಯಾಲೋಚಿಸಬಹುದಾದ, ಯಾವನೇ ವ್ಯಕ್ತಿಯ ಹೇಳಿಕೆಗಳನ್ನು ಸ್ಥಳದಲ್ಲಿಯೇ ಅಥವಾ ಅನ್ಯಥಾ ತೆಗೆದುಕೊಳ್ಳಬಹುದು;

(ಗ) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಕಾರ್ಯಸಂಸ್ಥೆಯಲ್ಲಿ ಪಾಲಿಸುತ್ತಿದ್ದಾರೆಯೋ ಎಂಬುದನ್ನು ಖಚಿತಪಡಿಸಿಕೊಳ್ಳಲು, ತಾನು ಸೂಕ್ತವೆಂದು ಆಲೋಚಿಸುವಂಥ ಪರೀಕ್ಷೆಯನ್ನು ಮತ್ತು ವಿಚಾರಣೆಯನ್ನು ನಡೆಸಬಹುದು;

(ಘ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು :

ಪರಂತು, ರಾಜ್ಯ ಉಮೇದುವಾರಿಕೆ ಸಲಹೆಗಾರನು ಅಥವಾ ರಾಜ್ಯ ಉಮೇದುವಾರಿಕೆ ಸಲಹೆಗಾರನು ಈ ಬಗ್ಗೆ ಲಿಖಿತ ಮೂಲಕ ಅಧಿಕೃತಗೊಳಿಸಬಹುದಾದ, ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗಿಂತ ಕಡಿಮೆ ಇರದ ಇತರ ವ್ಯಕ್ತಿಯು, ಯಾವ ಕಾರ್ಯಸಂಸ್ಥೆಗಳಿಗೆ ಸಂಬಂಧಿಸಿ ಸಮುಚಿತ ಸರ್ಕಾರವು ರಾಜ್ಯ ಸರ್ಕಾರವಾಗಿದೆಯೋ ಆ ಕಾರ್ಯಸಂಸ್ಥೆಗಳಿಗೆ ಸಂಬಂಧಿಸಿ ಈ ಉಪ-ಪ್ರಕರಣದ (ಕ), (ಖ), (ಗ) ಅಥವಾ (ಘ) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಯಾವುದೇ ಅಧಿಕಾರಗಳನ್ನು ಸಹ ಚಲಾಯಿಸಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯನ್ನೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಪರಾಧದಲ್ಲಿ ಸಿಕ್ಕಿಸುವ ಯಾವ ಪ್ರಶ್ನೆಗೂ ಉತ್ತರ ಕೊಡುವಂತೆ ಅಥವಾ ಯಾವುದೇ ಹೇಳಿಕೆಯನ್ನು ಕೊಡುವಂತೆ ಒತ್ತಾಯಪಡಿಸತಕ್ಕದ್ದಲ್ಲ.

30. ಅಪರಾಧಗಳು ಮತ್ತು ದಂಡಗಳು :—(1) ಯಾವನೇ ನಿಯೋಜಕನು—

(ಕ) ಉಮೇದುವಾರನಾಗಿ ನೇಮಿಂತನಾಗಲು ಅರ್ಹತೆ ಇಲ್ಲದಿರುವ ವ್ಯಕ್ತಿಯನ್ನು ಹಾಗೆ ನೇಮಿಸಿಕೊಂಡರೆ, ಅಥವಾ

(ಖ) ಉಮೇದುವಾರಿಕೆ ಕರಾರಿನ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕಾರ್ಯಗತಗೊಳಿಸಲು ವಿಫಲನಾದರೆ, ಅಥವಾ

(ಗ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವನು ನೇಮಿಸಿಕೊಳ್ಳಬೇಕೆಂದು ಅಗತ್ಯಪಡಿಸಲಾಗಿರುವ ಉಮೇದುವಾರರ ಸಂಖ್ಯೆಗೆ ಸಂಬಂಧಿಸಿದ ಉಪಬಂಧಗಳನ್ನು ಉಲ್ಲಂಘಿಸಿದರೆ,—ಅವನು ಆರು ತಿಂಗಳುಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(2) ಯಾವನೇ ನಿಯೋಜಕನನ್ನು ಅಥವಾ ಇತರ ಯಾವನೇ ವ್ಯಕ್ತಿಯನ್ನು—

(ಕ) ಯಾವುದೇ ಮಾಹಿತಿಯನ್ನು ಅಥವಾ ವಿವರಪಟ್ಟಿಕೆಯನ್ನು ಒದಗಿಸುವಂತೆ ಅಗತ್ಯಪಡಿಸಲಾಗಿದ್ದು ಅವನು—

(i) ಅಂಥ ಮಾಹಿತಿಯನ್ನು ಅಥವಾ ವಿವರಪಟ್ಟಿಕೆಯನ್ನು ಒದಗಿಸಲು ಇಂಕಾರ ಮಾಡಿದರೆ ಅಥವಾ ನಿರ್ಲಕ್ಷಿಸಿದರೆ, ಅಥವಾ

(ii) ಸುಳ್ಳಾಗಿರುವ ಮತ್ತು ಸುಳ್ಳೆಂದು ತಾನು ತಿಳಿದಿರುವ ಅಥವಾ ನಂಬಿರುವ ಅಥವಾ ನಿಜವೆಂದು ನಂಬದಿರುವ, ಯಾವುದೇ ಮಾಹಿತಿಯನ್ನು ಅಥವಾ ವಿವರ ಪಟ್ಟಿಕೆಯನ್ನು ಒದಗಿಸಿದರೆ ಅಥವಾ ಒದಗಿಸುವಂತೆ ಮಾಡಿದರೆ; ಅಥವಾ

(iii) ತಾನು ಒದಗಿಸಬೇಕೆಂದು ಅಗತ್ಯಪಡಿಸಲಾದ ಯಾವುದೇ ಮಾಹಿತಿಯನ್ನು ಪಡೆಯುವುದಕ್ಕೆ ಅವಶ್ಯವಾದ ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ಇಂಕಾರ ಮಾಡಿದರೆ ಅಥವಾ ಸುಳ್ಳು ಉತ್ತರ ಕೊಟ್ಟರೆ, ಅಥವಾ

(ಖ) ಕೇಂದ್ರ ಅಥವಾ ರಾಜ್ಯ ಉಮೇದುವಾರಿಕೆ ಸಲಹೆಗಾರನು ಅಥವಾ ಕೇಂದ್ರ ಅಥವಾ ರಾಜ್ಯ ಉಮೇದುವಾರಿಕೆ ಸಲಹೆಗಾರನು ಈ ಬಗ್ಗೆ ಲಿಖಿತ ಮೂಲಕ ಅಧಿಕೃತಗೊಳಿಸಬಹುದಾದ, ಸಹಾಯಕ ಉಮೇದುವಾರಿಕೆ ಸಲಹೆಗಾರನ ದರ್ಜೆಗಿಂತ ಕಡಿಮೆ ಇರದ ಇತರ ವ್ಯಕ್ತಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಪ್ರವೇಶವನ್ನು, ಪರಿಶೀಲನೆಯನ್ನು, ಪರೀಕ್ಷೆಯನ್ನು ಅಥವಾ ವಿಚಾರಣೆಯನ್ನು ಮಾಡುವುದಕ್ಕಾಗಿ ಯಾವುದೇ ಯುಕ್ತ ಸೌಲಭ್ಯವನ್ನು ಅವರಿಗೆ ಒದಗಿಸಲು ಇಂಕಾರ ಮಾಡಿದರೆ ಅಥವಾ ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದರೆ, ಅಥವಾ

(ಗ) ಉಮೇದುವಾರಿಕೆ ಸಲಹೆಗಾರನ ಅನುಮೋದನೆಯಿಲ್ಲದೆ ಅಧಿಕಕಾಲ ಕೆಲಸ ಮಾಡಲು ಯಾವನೇ ಉಮೇದುವಾರನನ್ನು ಅಗತ್ಯಪಡಿಸಿದರೆ,— ಅಥವಾ

(ಘ) ಉಮೇದುವಾರನ ತರಬೇತಿಗೆ ಸಂಬಂಧಿಸಿರದ ಯಾವುದೇ ಕೆಲಸಕ್ಕೆ ಅವನನ್ನು ನಿಯೋಜಿಸಿಕೊಂಡರೆ, ಅಥವಾ

(ಙ) ಬಿಡಿ ಕೆಲಸದ ಆಧಾರದ ಮೇಲೆ ಉಮೇದುವಾರನಿಗೆ ಹಣ ಸಂದಾಯ ಮಾಡಿದರೆ, ಅಥವಾ

(ಚ) ಉತ್ಪಾದನಾ ಬೋನಸ್‌ನ ಅಥವಾ ಪ್ರೋತ್ಸಾಹಕ ಯೋಜನೆಯಲ್ಲಿ ಭಾಗವಹಿಸಲು ಉಮೇದುವಾರನನ್ನು ಅಗತ್ಯಪಡಿಸಿದರೆ,

ಅವನು ಆರು ತಿಂಗಳುಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

31. ನಿರ್ದಿಷ್ಟವಾಗಿ ದಂಡವನ್ನು ಉಪಬಂಧಿಸದಿರುವಲ್ಲಿ ದಂಡ :—ಈ ಅಧಿನಿಯಮದ ಉಪಬಂಧವನ್ನು ಯಾವನೇ ನಿಯೋಜಕನು ಅಥವಾ ಇತರ ಯಾವನೇ ವ್ಯಕ್ತಿಯು ಉಲ್ಲಂಘಿಸಿದರೆ ಮತ್ತು ಆ ಬಗ್ಗೆ ಯಾವ ದಂಡವನ್ನೂ 30ನೇ ಪ್ರಕರಣದಲ್ಲಿ ಉಪಬಂಧಿಸಿರದಿದ್ದರೆ, ಅವನು ಐದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದು.

32. ಕಂಪನಿಗಳಿಂದ ಅಪರಾಧಗಳು :—(1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿದ ವ್ಯಕ್ತಿಯು ಕಂಪನಿಯಾಗಿದರೆ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದು ಮತ್ತು ಅದಕ್ಕನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದು:

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ ಅಂಥ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿರುವಂಥ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವುದೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಹೇಳಬಹುದೆಂದು ರುಜುವಾತಾದರೆ, ಅಂಥ ನಿರ್ದೇಶಕ ನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ :—ಈ ಪ್ರಕರಣದ ಉದ್ದೇಶಗಳಿಗಾಗಿ,

(ಕ) "ಕಂಪನಿ" ಎಂದರೆ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿಗೆ ಸಂಬಂಧಿಸಿ "ನಿರ್ದೇಶಕ" ಎಂದರೆ ಫರ್ಮಿನಲ್ಲಿನ ಪಾಲುಗಾರ,

33. ಅಪರಾಧಗಳ ಸಂಜ್ಞಾನ :— ಅಪರಾಧವು ನಡೆದಿದೆಯೆಂದು ಹೇಳಲಾದ ದಿನಾಂಕದಿಂದ ಆರು ತಿಂಗಳೊಳಗಾಗಿ ಉಮೇದುವಾರಿಕೆ ಸಲಹೆಗಾರನು ಆ ಬಗ್ಗೆ ಮಾಡಿದ ಲಿಖಿತ ಫಿರ್ಯಾದಿನ ಮೇಲಲ್ಲದೆ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗಿನ ಯಾವುದೇ ಅಪರಾಧದ ಸಂಜ್ಞಾನವನ್ನು ಯಾವ ನ್ಯಾಯಾಲಯವೂ ತೆಗೆದುಕೊಳ್ಳತಕ್ಕದ್ದಲ್ಲ.

34. ಅಧಿಕಾರಗಳ ಪ್ರತ್ಯಾಯೋಜನೆ:—ಸಮುಚಿತ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಅಧಿನಿಯಮದ ಅಥವಾ ಇದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ತಾನು ಚಲಾಯಿಸಬಹುದಾದಂಥ ಯಾವುದೇ ಅಧಿಕಾರವನ್ನು ತನ್ನ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿ ಮತ್ತು ಅಂಥ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು,—

(ಕ) ಸಮುಚಿತ ಸರ್ಕಾರವು ಕೇಂದ್ರ ಸರ್ಕಾರವಾಗಿರುವಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕೇಂದ್ರ ಸರ್ಕಾರಕ್ಕೆ ಅಧೀನವಾದ ಅಧಿಕಾರಿಯು ಅಥವಾ ಪ್ರಾಧಿಕಾರವು : ರಾಜ್ಯಸರ್ಕಾರವು ಅಥವಾ ರಾಜ್ಯ ಸರ್ಕಾರಕ್ಕೆ ಅಧೀನವಾದ ಅಧಿಕಾರಿಯು ಅಥವಾ ಪ್ರಾಧಿಕಾರವು, ಮತ್ತು

(ಖ) ಸಮುಚಿತ ಸರ್ಕಾರವು ರಾಜ್ಯ ಸರ್ಕಾರವಾಗಿರುವಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ, ರಾಜ್ಯ ಸರ್ಕಾರಕ್ಕೆ ಅಧೀನವಾದ ಅಧಿಕಾರಿಯು ಅಥವಾ ಪ್ರಾಧಿಕಾರವು, ಸಹ ಚಲಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

35. ಉಲ್ಲೇಖಗಳ ಅರ್ಥಾನ್ವಯ :—(1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳಲ್ಲಿ ಉಮೇದುವಾರಿಕೆ ಪರಿಷತ್ತಿನ ಬಗ್ಗೆ ಮಾಡಲಾದ ಯಾವುದೇ ಉಲ್ಲೇಖಕ್ಕೆ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ, ಯಾವ ಕಾರ್ಯಸಂಸ್ಥೆಗೆ ಸಂಬಂಧಿಸಿ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿದೆಯೋ ಆ ಕಾರ್ಯಸಂಸ್ಥೆಯಲ್ಲಿನ ಹೆಸರಿಸಲಾದ ವ್ಯಾಪಾರದಲ್ಲಿನ ಉಮೇದುವಾರಿಕೆ ತರಬೇತಿಗೆ ಸಂಬಂಧಿಸಿ ಕೇಂದ್ರ ಉಮೇದುವಾರಿಕೆ ಪರಿಷತ್ತು ಎಂದು ಮತ್ತು ಯಾವ ಕಾರ್ಯಸಂಸ್ಥೆಗೆ ಸಂಬಂಧಿಸಿ ರಾಜ್ಯ ಸರ್ಕಾರವು ಸಮುಚಿತ ಸರ್ಕಾರ ವಾಗಿದೆಯೋ ಆ ಕಾರ್ಯಸಂಸ್ಥೆಯಲ್ಲಿನ ಹೆಸರಿಸಲಾದ ವ್ಯಾಪಾರದಲ್ಲಿನ ಉಮೇದುವಾರಿಕೆ ತರಬೇತಿಗೆ ಸಂಬಂಧಿಸಿ ರಾಜ್ಯ ಉಮೇದುವಾರಿಕೆ ಪರಿಷತ್ತು ಎಂದು ಅರ್ಥವಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳಲ್ಲಿ ಉಮೇದುವಾರಿಕೆ ಸಲಹೆಗಾರನ ಬಗ್ಗೆ ಮಾಡಲಾದ ಯಾವುದೇ ಉಲ್ಲೇಖಕ್ಕೆ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,—

(ಕ) ಯಾವ ಕಾರ್ಯಸಂಸ್ಥೆಗೆ ಸಂಬಂಧಿಸಿ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿದೆಯೋ ಆ ಕಾರ್ಯಸಂಸ್ಥೆಯಲ್ಲಿನ ಹೆಸರಿಸಲಾದ ವ್ಯಾಪಾರದಲ್ಲಿನ ಉಮೇದುವಾರಿಕೆ ತರಬೇತಿಗೆ ಸಂಬಂಧಿಸಿ ಕೇಂದ್ರ ಉಮೇದುವಾರಿಕೆ ಸಲಹೆಗಾರನೆಂದು ಮತ್ತು ಯಾವ ಕಾರ್ಯ ಸಂಸ್ಥೆಗೆ ಸಂಬಂಧಿಸಿ ರಾಜ್ಯ ಸರ್ಕಾರವು ಸಮುಚಿತ ಸರ್ಕಾರವಾಗಿದೆಯೋ ಆ ಕಾರ್ಯಸಂಸ್ಥೆಯಲ್ಲಿನ ಹೆಸರಿಸಲಾದ ವ್ಯಾಪಾರದಲ್ಲಿನ ಉಮೇದುವಾರಿಕೆ ತರಬೇತಿಗೆ ಸಂಬಂಧಿಸಿ ರಾಜ್ಯ ಉಮೇದುವಾರಿಕೆ ಸಲಹೆಗಾರನೆಂದು ಅರ್ಥವಿಸತಕ್ಕದ್ದು,

(ಖ) 27ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ತನಗೆ ವಹಿಸಲಾದ ಉಮೇದುವಾರಿಕೆ ಸಲಹೆಗಾರನ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಅಡಿಷನಲ್, ಜಂಟಿ, ಪ್ರಾದೇಶಿಕ, ಉಪ ಅಥವಾ ಸಹಾಯಕ ಉಮೇದುವಾರಿಕೆ ಸಲಹೆಗಾರ—ಇವರನ್ನು ಆ ಉಲ್ಲೇಖವು ಒಳಗೊಂಡಿದೆ ಎಂದು ಭಾವಿಸತಕ್ಕದ್ದು.

36. ಸದ್ಭಾವನೆಯಿಂದ ಮಾಡಿದ ಕಾರ್ಯದ ರಕ್ಷಣೆ :— ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

37. ನಿಯಮ ರಚನಾಧಿಕಾರ :— (1) ಕೇಂದ್ರ ಸರ್ಕಾರವು,ಕೇಂದ್ರ ಉಮೇದುವಾರಿಕೆ ಪರಿಷತ್ತಿನೊಡನೆ ಸಮಾಲೋಚಿಸಿದ ಅನಂತರ ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು, ಅಂಥ ಯಾವುದೇ ನಿಯಮದ ಉಲ್ಲಂಘನೆಯು ಐವತ್ತು ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ತದನಂತರ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ

ಪರಿಣಾಮಕಾರಿಯಾಗತಕ್ಕದಲ್ಲ: ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದು.

38. [ನಿರಸಿತ]

## ಅನುಸೂಚಿ

( 16ನೇ ಪ್ರಕರಣವನ್ನು ನೋಡಿ )

ಕೆಲಸಗಾರರ ನಷ್ಟಪರಿಹಾರ ಅಧಿನಿಯಮ, 1923ರಲ್ಲಿ, ಅದನ್ನು ಉಮೇದುವಾರರ ಅಧಿನಿಯಮ, 1961ರ ಮೇರೆಗೆ ಉಮೇದುವಾರರಿಗೆ ಅನ್ವಯಿಸುವಲ್ಲಿ ಮಾಡಲಾದ ಮಾರ್ಪಾಟುಗಳು

ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923ರಲ್ಲಿ—

(1) 2ನೇ ಪ್ರಕರಣದಲ್ಲಿ

(ಕ) (ಜ) ಖಂಡಕ್ಕೆ ಬದಲಾಗಿ ಕೆಳಕಂಡದನ್ನು ಸೇರಿಸತಕ್ಕದು.—

"(ಜ) "ನಿಯೋಜಕ" ಎಂದರೆ, ಉಮೇದುವಾರಿಕೆ ಅಧಿನಿಯಮ, 1961ರಲ್ಲಿ ಪರಿಭಾಷಿಸಿದಂತೆ ಒಬ್ಬ ಅಥವಾ ಒಬ್ಬನಿಗಿಂತ ಹೆಚ್ಚು ಉಮೇದುವಾರರನ್ನು ನೇಮಿಸಿಕೊಂಡಿರುವ ನಿಯೋಜಕ,"

(ಖ) (ಟ) ಖಂಡವನ್ನು ಬಿಟ್ಟು ಬಿಡತಕ್ಕದು.

(ಗ) (ಡ) ಖಂಡಕ್ಕೆ ಬದಲಾಗಿ ಕೆಳಗಿನ ಖಂಡವನ್ನು ಸೇರಿಸತಕ್ಕದು.—

"(ಡ) "ಮಜೂರಿ" ಎಂದರೆ ಉಮೇದುವಾರರ ಅಧಿನಿಯಮ, 1961ರ ಪ್ರಕರಣ 13 (1)ರ ಮೇರೆಗೆ ಒಬ್ಬ ಉಮೇದುವಾರನಿಗೆ ಸಂದಾಯ ಮಾಡಬೇಕಾದ ವೃತ್ತಿವೇತನ ;"

"(ಘ) (ಢ) ಖಂಡಕ್ಕೆ ಬದಲಾಗಿ ಕೆಳಕಂಡ ಖಂಡವನ್ನು ಸೇರಿಸತಕ್ಕದು.—"

'(ಢ) "ಕೆಲಸಗಾರ" ಎಂದರೆ, ಉಮೇದುವಾರರ ಅಧಿನಿಯಮ, 1961ರಲ್ಲಿ ಪರಿಭಾಷಿಸಿದಂತೆ, ಉಮೇದುವಾರನಾಗಿ ನೇಮಿತನಾದ ಹಾಗೂ ಅನುಸೂಚಿ IIರಲ್ಲಿ ನಿರ್ದಿಷ್ಟಪಡಿಸಿದಂತೆ ಅಂಥ ಯಾವುದೇ ನಾತೆಯಲ್ಲಿ ಉಮೇದುವಾರಿಕೆ ತರಬೇತಿಯ ಕಾಲದಲ್ಲಿ ನಿಯೋಜಿತನಾಗಿರುವ ಯಾವನೇ ವ್ಯಕ್ತಿ ;'

(2) 12ನೇ ಪ್ರಕರಣವನ್ನು ಬಿಟ್ಟು ಬಿಡತಕ್ಕದು.

(3) 15ನೇ ಪ್ರಕರಣವನ್ನು ಬಿಟ್ಟು ಬಿಡತಕ್ಕದು.

(4) 21 (1)ನೇ ಪ್ರಕರಣದ ಪರಂತುಕವನ್ನು ಬಿಟ್ಟುಬಿಡತಕ್ಕದು.

(5) 24ನೇ ಪ್ರಕರಣದಲ್ಲಿ ಬರುವ "ಅಥವಾ ನೋಂದಾಯಿತ ಟ್ರೇಡ್ ಯೂನಿಯನ್" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದು.

(6) 30 (1) ನೇ ಪ್ರಕರಣದ (ಘ) ಖಂಡವನ್ನು ಬಿಟ್ಟುಬಿಡತಕ್ಕದು.

(7) IIನೇ ಅನುಸೂಚಿಯಲ್ಲಿನ (VI)ನೇ, (XII)ನೇ, (XIII)ನೇ, (XVII)ನೇ, (XVIII)ನೇ, (XX)ನೇ, (XXII)ನೇ, (XXIV)ನೇ, (XXV) ನೇ, ಮತ್ತು (XXXII)ನೇ ಖಂಡಗಳನ್ನು ಬಿಟ್ಟು ಬಿಡತಕ್ಕದು.

The above translation in Kannada of the Apprentices Act, 1961 (Act No 52 of 1961) has been authorised by the President to be published in the Official Gazette under Clause (a) of Section 2 of the Authorised Translation (Central Laws) Act, 1973.

*Secretary to Government, of India.*